# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 191 Issue: 191 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 31.01.2025 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



Advertise
With HAMPI TIMES
1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper
Contact for Advertisements: 9448633038



ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–10

ವಿಷಯ: ಬಿಳಿ ಬಣ್ಣದ ರೋಹಿತದ ಪುನರ್ ಸಂಯೋಜನೆಯ ಚಿತ್ರ ಬಿಡಿಸಿ.

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.

31–01–2025

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

HAMPI TIMES VIJAYANAGARA

ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099
ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038


ಪುರಂದರದಾಸರು ಸಮಾಜದ ಮನಸ್ಸುಗಳನ್ನು ತಿದ್ದಲು ಪ್ರಯತ್ನಿಸಿದರು | ಪ್ರಾಂಶುಪಾಲ ಬಿಳಿಕೆರೆ ಬಿ.ಎಸ್.ಗಂಗಾಧರ ಆಚಾರ್ ಹೇಳಿಕೆ

# ಹೆತ್ತ ತಂದೆತಾಯಿಗಳ ನೋಯಿಸಿ ನಿತ್ಯ ದಾನವ ಮಾಡಿದರೆ ಏನು ಫಲ

## ಸಾಹಿತ್ಯ ಸಂಪರ್ಕವಿಲ್ಲದ ಸಂಗೀತದ ಆಸ್ವಾದನೆ ಕಡಿಮೆ ಆಗುತ್ತಿದೆ : ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ

## ವಿಜಯನಗರದ ಅರಸ ಶ್ರೀಕೃಷ್ಣ ದೇವರಾಯನು ಪುರಂದರದಾಸರಿಗೆ ದಾನವಾಗಿ ಕೊಟ್ಟ ತಾಮ್ರದ ಶಾಸನ ಕಮಲಾಪುರದ ಮ್ಯೂಸಿಯಂನಲ್ಲಿದೆ

**ಹಂಪಿ ಟೈಮ್ಸ್ ಹೊಸಪೇಟೆ**

ಪುರಂದರದಾಸರು ಹಗಲೆಲ್ಲ ಭಿಕ್ಷಾಟನೆಯಲ್ಲಿ ತೊಡಗಿಸಿಕೊಂಡು, ರಾತ್ರಿ ಸರಸ್ವತಿ ದೇವಿಯ ಅನುಸಂಧಾನ ಮಾಡಿಕೊಂಡು ಸಂಗೀತ ಶಾಸ್ತ್ರ ಮೂಲಕ 4,75,000 ಕೀರ್ತನೆಗಳನ್ನು ಬರೆದು ಶ್ರೇಷ್ಠರಾಗಿದ್ದಾರೆ ಎಂದು ಮೈಸೂರಿನ ಕಥಾಕೀರ್ತನಕಾರರೂ, ಪ್ರಾಂಶು ಪಾಲರಾದ ಬಿಳಿಕೆರೆ ಬಿ.ಎಸ್.ಗಂಗಾಧರ ಆಚಾರ್ ಹೇಳಿದರು.

ಕನ್ನಡ ವಿಶ್ವವಿದ್ಯಾಲಯ ಸಂಗೀತ ಮತ್ತು ನೃತ್ಯ ವಿಭಾಗದಲ್ಲಿ ಗುರುವಾರ ಆಯೋಜಿಸಿದ್ದ ಸಂಗೀತ ಮತ್ತು ನೃತ್ಯ ವಿಭಾಗ ಮತ್ತು ಪುರಂದರದಾಸ ಅಧ್ಯಯನ ಪೀಠದ ಸಹಯೋಗದಲ್ಲಿ ಪುರಂದರದಾಸರ 461ನೇ ಆರಾಧನೆಯ ನಿಮಿತ್ತ ಪುರಂದರದಾಸರ ಕೀರ್ತನೆಗಳಲ್ಲಿ ಭಕ್ತಿ ಮತ್ತು ಸಂಗೀತ ವಿಶೇಷ ಉಪನ್ಯಾಸ ಹಾಗೂ ಕೀರ್ತನ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪುರಂದರದಾಸರ ಕಾಲದ ಜನಜೀವನಕ್ಕೆ ನೆಮ್ಮದಿ ಬೇಕಾಗಿತ್ತು. ಅದಕ್ಕಾಗಿ ಜನರ ಜೀವನ ಭಕ್ತಿಯ ಪರಕಾಷ್ಠತೆ ತಲುಪಿತ್ತು. ಭಕ್ತಿಯೆಂದರೆ ಅನುರಾಗ, ಭಕ್ತಿಯು ಅವಿರೋಧವಾಗಿ ಆತ್ಮಾನಂದ ಕೊಡುತ್ತದೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ಕೀರ್ತನೆಯನ್ನು ಪುರಂದರದಾಸರು ಜೀವನಕ್ಕೆ ಹೋಲಿಸಿದ್ದಾರೆ. ಪರಾಕು ಮಾಡದೇ ಪರಾಂಬರಿಸು ಎನ್ನ ಅಪರಾಧಗಳ ಕ್ಷಮಿಸು ಎಂದು ಬೇಡಿದ್ದಾರೆ. ಅವರ ಕೀರ್ತನೆಗಳಲ್ಲಿ ಮಹಿಳೆಗೆ ಗೌರವವಿದೆ, ಬುದ್ಧಿಮಾತುಗಳಿವೆ. ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ ಮಗಳೆ ಎಂಬ ಕೀರ್ತನೆಯು ಇಂದಿಗೂ ಬಹಳ ಪ್ರಸ್ತುತವಾಗಿದೆ. ಮದುವೆಯಾದ ಕೆಲವೇ ದಿನಗಳಲ್ಲಿ ಡೈವೋರ್ಸ್ ತೆಗೆದುಕೊಳ್ಳುವ ಮನಃಸ್ಥಿತಿಗೆ ಕೂಡಿಬಾಳಬೇಕೆಂಬ ಬುದ್ಧಿಮಾತುಗಳು ಕಣ್ಣು ತೆರೆಸುತ್ತವೆ. ಹೆತ್ತ ತಂದೆತಾಯಿಗಳ ನೋಯಿಸಿ, ನಿತ್ಯ ದಾನವ ಮಾಡಿದರೆ ಏನು ಫಲ ಎಂದು ಹಾಡಿರುವ ಅವರ ಕೀರ್ತನೆಯು ವೃದ್ಧ ತಂದೆತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸಬೇಕೆಂಬ ಇವತ್ತಿನ ಮನೋಧರ್ಮವನ್ನು ಟೀಕಿಸುತ್ತದೆ, ಎಚ್ಚರಿಸುತ್ತದೆ. ಹೀಗೆ ಎಲ್ಲ ಆಯಾಮಗಳಲ್ಲಿ ಕೀರ್ತನೆಗಳ ಮೂಲಕ



ಪುರಂದರದಾಸರು ಸಮಾಜದ ಮನಸ್ಸುಗಳನ್ನು ತಿದ್ದಲು ಪ್ರಯತ್ನಿಸಿದರು ಎಂದು ಬಿಳಿಕೆರೆ ಗಂಗಾಧರ ಅವರು ಸಂಗೀತ ವಿದ್ಯಾರ್ಥಿಗಳಿಗೆ ಮತ್ತು ಯುವ ಸಂಶೋಧಕರಿಗೆ ತಿಳಿಸಿಕೊಟ್ಟರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅವರು ತಂಬೂರಿಯನ್ನು ಮೀಟುವ ಮೂಲಕ ವಿಶೇಷ ಉಪನ್ಯಾಸಕ್ಕೆ ಚಾಲನೆ ನೀಡಿ, ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪುರಂದರದಾಸರಿಗೂ, ಕನ್ನಡ ವಿಶ್ವವಿದ್ಯಾಲಯಕ್ಕೂ ಎರಡು ರೀತಿಯ ಸಂಬಂಧವಿದೆ. ಪುರಂದರದಾಸರು ಓಡಾಡಿದ ಹಂಪಿಯ ನೆಲದ ಪಕ್ಕದಲ್ಲಿ ಕನ್ನಡ ವಿಶ್ವವಿದ್ಯಾಲಯ ನೆಲೆಗೊಂಡಿದೆ. ಪುರಂದರದಾಸರು ಬರಿಗೈ ದಾಸರಾಗಿದ್ದರು. ಕನ್ನಡ ವಿಶ್ವವಿದ್ಯಾಲಯವು ಬರಿಗೈ ಆಗಿದೆ ಎಂದು ಮಾರ್ಮಿಕವಾಗಿ ನುಡಿಯುತ್ತ, ಆರ್ಟಿಫಿಷಿಯಲ್ ಇಂಟಲಿಜೆನ್ಸ್‌ನ ಇಂದಿನ ಕಾಲದಲ್ಲಿ ಪುರಂದರದಾಸರನ್ನು ನಾವು ನೆನಪಿಸಿಕೊಳ್ಳುತ್ತೇವೆ ಎಂದರೆ ಅವರ ಜೀವನದ, ಕೀರ್ತನೆಗಳ, ಮಹತ್ವ ಮತ್ತು ಪ್ರಸ್ತುತತೆ ತಿಳಿಯುತ್ತದೆ. ವಚನ ಸಾಹಿತ್ಯ ಪರಂಪರೆಯು ಹರನನ್ನು ಶ್ರೇಷ್ಠ ಎಂದರೆ ದಾಸಸಾಹಿತ್ಯ ಪರಂಪರೆಯು ಹರಿಯನ್ನು ಶ್ರೇಷ್ಠನನ್ನಾಗಿಸಿದೆ. ಎರಡು ಪರಂಪರೆಗಳು ಭಕ್ತಿಯ ತಳಹದಿಯ ಮೇಲಿದ್ದರೂ ವಚನ ಸಾಹಿತ್ಯವು ವೈಚಾರಿಕತೆಗೆ ಪ್ರಾಧಾನ್ಯತೆ ನೀಡಿದರೆ, ದಾಸಸಾಹಿತ್ಯವು ಆತ್ಮಾನುಸಂಧಾನಕ್ಕೆ ಪ್ರಾಧಾನ್ಯತೆ ನೀಡುತ್ತದೆ. ಜನಸಾಮಾನ್ಯರಲ್ಲಿ ದಾಸಸಾಹಿತ್ಯವು ಜನಪ್ರಿಯವಾಗಿದೆ. ನಿಜ ಬದುಕಿನ ದರ್ಶನ ಮಾಡಿಸುವುದೇ ದಾಸಸಾಹಿತ್ಯ. ಮನುಷ್ಯನ ಹೃದಯ ಮೃದು ಮಾಡುವುದೇ ಕನ್ನಡ ಸಾಹಿತ್ಯ ಪರಂಪರೆಯ ಹೂರಣ ಎಂದು ತಿಳಿಸುತ್ತ, ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣ ದೇವರಾಯನು ಪುರಂದರದಾಸರಿಗೆ ದಾನವಾಗಿ ಕೊಟ್ಟ ತಾಮ್ರದ ಶಾಸನ ಕಮಲಾಪುರದ ಮ್ಯೂಸಿಯಂನಲ್ಲಿದೆ ಎಂದು ಮಾಹಿತಿ ನೀಡಿದರು.


ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ, ಇವತ್ತಿನ ಡಿ.ಜೆ ಹಾಡುಗಳಿಗೆ ಕುಣಿಯುವ ಸಂಗೀತ ಯುಗದಲ್ಲಿ ಸಂಗೀತ ಮನಸ್ಸು ಮತ್ತು ಮನೋಧರ್ಮ ರೂಪಿಸಿ ಮನಸ್ಸನ್ನು ಕಟ್ಟಿಕೊಡಬೇಕು. ಪುರಂದರದಾಸರು ರಾಗಗಳ ಜಾತಿ, ಸ್ವರಗಳ ಜಾತಿ, ತಾಳ, ಲಯಗಳ ಮೇಲೆ ಕೆಲಸ ಮಾಡಿದ್ದಾರೆ. ಮೊಟ್ಟ ಮೊದಲ ಬಾರಿಗೆ ಕನ್ನಡದಲ್ಲಿ ಲಕ್ಷ ಮತ್ತು ಲಕ್ಷಣ ಗೀತೆಗಳನ್ನು ಬರೆಯುತ್ತಾರೆ. ರೂಪಕ ಮತ್ತು ಝುಂಪೆ ತಾಳಗಳು ಪುರಂದರದಾಸರಿಗೆ ಬಹಳ ಪ್ರಿಯವಾಗಿತ್ತು. ಈ ಎಲ್ಲ ಹಿನ್ನಲೆಯಲ್ಲಿ ಪುರಂದರದಾಸರನ್ನು ಕರ್ನಾಟಕ ಸಂಗೀತದ ಪಿತಾಮಹ ಎಂದು ಕರೆಯಲಾಗಿದೆ ಎಂದು ತಿಳಿಸಿದರು.

ಪುರಂದರದಾಸ ಅಧ್ಯಯನ ಪೀಠದ ಸಂಚಾಲಕರಾದ ಡಾ.ಎಸ್.ಆರ್. ಚನ್ನವೀರಪ್ಪ ಸ್ವಾಗತಿಸಿದರು, ಸಂಶೋಧನಾ ವಿದ್ಯಾರ್ಥಿಗಳಾದ ಮಲ್ಲಿಕಾರ್ಜುನ ನಿರೂಪಿಸಿದರು, ಪ್ರವೀಣ್‌ಕುಮಾರ್ ವಂದಿಸಿದರು. ಕಾಗದ ಬಂದಿದೆ ನಮ್ಮ ಕಮಲನಾಭನದು ಎಂಬ ಕೀರ್ತನೆಯ ಮೂಲಕ ಅಕ್ಷತಾ ಪ್ರಾರ್ಥಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿಗಳಾದ ಗುಂಡಿ ಭರತ್, ತನುಜಾ ಕೆ.ಎಸ್., ಪೂಜಾರಿ ದುರ್ಗೇಶ್, ಆಸೀಫ್ ಮುಲ್ಲಾ, ದೊಡ್ಡಮನಿ ಜ್ಯೋತಿ ಮೊದಲಾದ ವಿದ್ಯಾರ್ಥಿಗಳು ಪುರಂದರದಾಸರ ಕೀರ್ತನೆಗಳ ಗಾಯನ ನಡೆಸಿಕೊಟ್ಟರು. ವಿದ್ಯಾರ್ಥಿ ಮಧು ಹಾರ್ಮೋನಿಯಂ ಸಾಥಿ ನೀಡಿದರು. ದೊಡ್ಡಬಸಪ್ಪ, ಹನುಮಂತಪ್ಪ ತಬಲಾಸಾಥಿಗಳಾಗಿದ್ದರು.

ಡೀನರಾದ ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಶಿವಾನಂದ ಎಸ್.ವಿರಕ್ತಮಠ, ಮಾಹಿತಿಕೇಂದ್ರದ ನಿರ್ದೇಶಕರಾದ ಡಾ.ಡಿ.ಮೀನಾಕ್ಷಿ, ಸಂಗೀತ ವಿಭಾಗದ ಪಂ. ವಿರೂಪಾಕ್ಷಪ್ಪ ಇಟಗಿ, ಡಾ.ತಿಮ್ಮಣ್ಣ ಭೀಮರಾಯ, ಜ್ಯೋತಿ ಉಪಸ್ಥಿತರಿದ್ದರು.


ಹಂಪಿ ಟೈಮ್ಸ್‌ನಲ್ಲಿ ಸುದ್ದಿ, ಪ್ರಕಟಣೆ, ಜಾಹೀರಾತಿಗಾಗಿ ಸಂಪರ್ಕಿಸಿ
M:9448633038


## ಆನಂದ ಬಾಣ




## ಮೈಕ್ರೋ ನ್ಯೂಸ್

### ಹಂಪಿ ಉತ್ಸವ : ವಸ್ತು ಪ್ರದರ್ಶನ ಮಳಿಗೆ ಕಾಯ್ದಿರಿಸಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2025ನೇ ಸಾಲಿನ ಹಂಪಿ ಉತ್ಸವ ಫೆ.28 ಮತ್ತು ಮಾ.01, 02 ರಂದು ನಡೆಯಲಿರುವ ಹಿನ್ನಲೆಯಲ್ಲಿ ವಿವಿಧ ಮಳಿಗೆಗಳನ್ನು ಸಿದ್ದಪಡಿಸಿ ವಸ್ತು ಪ್ರದರ್ಶನಕ್ಕಾಗಿ ವ್ಯವಸ್ಥೆಯನ್ನು ಮಾಡಲಾಗಿದೆ. ವಸ್ತುಪ್ರದರ್ಶನದಲ್ಲಿ ಮಳಿಗೆ ಕಾಯ್ದಿರಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಹಂಪಿ ಉತ್ಸವದ ವಸ್ತು ಪ್ರದರ್ಶನ ಉಪ ಸಮಿತಿಯ ಅಧ್ಯಕ್ಷರು ಹಾಗೂ ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಬಿ.ಶರಣಪ್ಪ ಮುದಗಲ್ ತಿಳಿಸಿದ್ದಾರೆ.




ಹಂಪಿ ಉತ್ಸವದಲ್ಲಿ 10*10 ಅಡಿ ಅಳತೆಯ ಮಳಿಗೆಗಳನ್ನು ವಸ್ತು ಪ್ರದರ್ಶನಕ್ಕಾಗಿ ಮುಂಗಡವಾಗಿ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ. ಕಾಯ್ದಿರಿಸುವವರು ಅರ್ಜಿಯೊಂದಿಗೆ ಅಧ್ಯಕ್ಷರು, ಹಂಪಿ ಉತ್ಸವ, ವಿಜಯನಗರ ಇವರ ಹೆಸರಿನಲ್ಲಿ ರೂ.5000 ಮೊತ್ತದ ಡಿ.ಡಿ.ಯನ್ನು ಫೆ.15, ಸಂಜೆ 5.30 ರೊಳಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಸೆಂಟರ್ ಆಫ್ ಎಕ್ಸೆಲ್ಸ್ ಕಟ್ಟಡ, ನ್ಯಾಷನಲ್ ಕಾಲೇಜ್ ಹಿಂಭಾಗ, ಎನ್.ಸಿ.ಕಾಲೋನಿ ಹರಿಹರ ರಸ್ತೆ, ಹೊಸಪೇಟೆ–583203 ಈ ವಿಳಾಸಕ್ಕೆ ತಲುಪಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಅನಿಲ ಕುಮಾರ್ ಮೊ.9449135765 ಮೊಬೈಲ್ ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಹಂಪಿ ಉತ್ಸವ : ಫೆ.೦೩ ಹೊಟೇಲ್ ಮಾಲೀಕರಿಗೆ, ವ್ಯವಸ್ಥಾಪಕರೊಂದಿಗೆ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವವಿಖ್ಯಾತ ಹಂಪಿ ಉತ್ಸವ ನಿಮಿತ್ತ ಅತಿ ಗಣ್ಯ, ಗಣ್ಯ ಕಲಾವಿದರು ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳಿಗೆ ವಸತಿ ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕಿನ ಎಲ್ಲಾ ಹೋಟೆಲ್ ಮಾಲೀಕರು ಹಾಗೂ ವ್ಯವಸ್ಥಾಪಕರೊಂದಿಗೆ ಚರ್ಚಿಸಲು ಫೆ.3 ರಂದು, ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ಸಭೆಗೆ ಯಾವುದೇ ಪ್ರತಿನಿಧಿಗಳನ್ನು ನಿಯೋಜಿಸದೇ ಖುದ್ದಾಗಿ ಹಾಜರಾಗಲು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

# ಸ್ವಾತಂತ್ರ್ಯ ದೊರಕಿಸಿದ ಮಹಾತ್ಮನ ನೆನಹು



**ಹಂಪಿ ಟೈಮ್ಸ್ ಕೂಡ್ಲಿಗಿ**

ಭಾರತ ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರ ಪಡೆದುಕೊಂಡ ದಿನದಿಂದಲೂ ಸಹ ನಿರಂತರವಾಗಿ ಪ್ರತಿವರ್ಷ ನೆನೆದುಕೊಳ್ಳುವ ವ್ಯಕ್ತಿ ಎಂದರೆ ಅದುವೇ ರಾಷ್ಟ್ರಪಿತ ಮಹಾತ್ಮ ಗಾಂಧಿ ಎಂದು ಮೊಳಕಾಲ್ಮೂರು ಸಪಪೂ ಕಾಲೇಜು ಪ್ರಾಚಾರ್ಯ ಗೋವಿಂದಪ್ಪ ಹೇಳಿದರು.

ಪಟ್ಟಣದ ಗಾಂಧಿ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕದಲ್ಲಿ ಗುರುವಾರ ತಾಲೂಕು ಆಡಳಿತ ಹಾಗೂ ಗಾಂಧಿ ಸ್ಮಾರಕ ಸಮಿತಿ ಏರ್ಪಡಿಸಿದ್ದ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಗಾಂಧೀಜಿ ಈ ದೇಶಕ್ಕೆ ನೀಡಿದ ಕೊಡುಗೆ, ಸಾಹಿತ್ಯ ಕೊಡುಗೆ, ತತ್ವಗಳು, ಬೋಧನೆ, ಸ್ವಾತಂತ್ರ್ಯ ಹೋರಾಟ, ಸಿದ್ಧಾಂತಗಳು ಎಲ್ಲ ರೀತಿಯ ಕೊಡುಗೆಗಳಿಂದ ರಾಷ್ಟ್ರಪಿತನಾಗಿ ಎಲ್ಲರ ಮನದಲ್ಲಿ ಉಳಿದಿದ್ದಾರೆ ಎಂದರು. ಗಾಂಧಿ ಕೇವಲ ಭಾರತದಲ್ಲಿ ಮಾತ್ರವಲ್ಲದೇ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿ ಅಲ್ಲಿಯೂ ಮಹಾತ್ಮ ಎನಿಸಿಕೊಂಡವರು. ದೇಶದಲ್ಲಿನ ಬಡತನ, ದಾರಿದ್ರ್ಯ ಕಂಡು ತುಂಡು ಬಟ್ಟೆಯ ಪಕೀರನಾಗಿ ಬ್ರಿಟಿಷರ ವಿರುದ್ಧ ಅಸಹಕಾರ ಚಳವಳಿ ಮಾಡಿ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದು ಇತಿಹಾಸ ಎಂದು ತಿಳಿಸಿದರು.

ಹುತಾತ್ಮರ ಗೌರವಾರ್ಥ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಇಳಿಸಿ ಗೌರವ ಸೂಚಿಸಿ ಏರಿಸಲಾಯಿತು. ನಂತರ ಎರಡು ನಿಮಿಷ ಮೌನಚರಣೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಭಗವದ್ಗೀತೆ, ಕುರಾನ್, ಬೈಬಲ್ ಮತ್ತು ಬೌದ್ಧ ಧರ್ಮದ ಶಾಂತಿ ಸಂದೇಶ ಪಠಿಸಲಾ ಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಗಲಿದ ದೇಶಪ್ರೇಮಿಗಳ ನೆನೆದು ಧೂಪ ಹಾಕಿ ಅಶ್ರುತರ್ಪಣ ಸಲ್ಲಿಸಿದರು. ಇದೇ ವೇಳೆ ತಹಸೀ ಲ್ದಾರ್ ಎಂ. ರೇಣುಕಾ, ಗ್ರೇಡ್ 2 ತಹಸೀಲ್ದಾರ್ ವಿ.ಕೆ.ನೇತ್ರಾವತಿ, ತಾಪಂ ಇಒ ಕೆ. ನರಸಪ್ಪ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ನಿಕಟಪೂರ್ವ ಅಧ್ಯಕ್ಷ ಪಿ.ಶಿವರಾಜ್, ನಿವೃತ್ತ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ತಳವಾರ ಶರಣಪ್ಪ, ಪಪಂ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಬಿಇಒ ಪದ್ಮನಾಭ ಕರಣಂ, ಗಾಂಧಿ ಸ್ಮಾರಕ ಸಮಿತಿ ಅಧ್ಯಕ್ಷ ಡಿ.ನಾಗರಾಜ, ಎ.ಎಂ.ರಾಘವೇಂದ್ರ, ಜೆಸಿಐನ ನಾಗರಾಜ ಕೊಟ್ರಪ್ಪನವರ್, ಸಂದೀಪ್, ಜಿಲಾನ್, ಸಪಪೂ ಕಾಲೇಜು ಪ್ರಭಾರಿ ಪ್ರಾಚಾರ್ಯ ಜೆ.ವೆಂಕಟೇಶ, ಉಪ ಪ್ರಾಚಾರ್ಯ ಟಿ.ಬಸವರಾಜ, ಬ್ಯಾಳಿ ವಿಜಯಕುಮಾರ್ ಗೌಡ, ಬ್ಯಾಳಿ ಗೌರಮ್ಮ, ಪ್ರಜಾಪಿತ ಈಶ್ವರಿ ವಿಶ್ವವಿದ್ಯಾಲಯದ ಸಂಚಾಲಕಿ ಶಶಿಕಲಾ ಅಕ್ಕಾ,ಎಸ್.ವಿರುಪಾಕ್ಷ ಮೂರ್ತಿ, ಹಯವದನಚಾರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.


SSLC ಹಂಪಿ ಟೈಮ್ಸ್ ಮಾರ್ಗದರ್ಶಿ
ಈ ಭಾರಿ ಫಲಿತಾಂಶ ನಮ್ಮದೆ
ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಮಾರ್ಗದರ್ಶಿ
ಹೈಸ್ಕೋರ್ ಗಳಿಸಲು ನಿತ್ಯ ಬರೆದು–ಓದಿ

ಪುಟ. 3ರಲ್ಲಿ

## ವ್ಯಕ್ತಿಯ ಬರ್ಬರ ಕೊಲೆ–ಆರೋಪಿ ಅಂದರ್

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ರಿಂಗ್‌ರಸ್ತೆಯ ಭಟ್ರಹಳ್ಳಿ ಆಂಜನೇಯ ಗುಡಿ ಹತ್ತಿರ ಪಟ್ಟಣದ ತಾರಿಹಳ್ಳಿ ರಾಮಾಲಿ(38) ಎಂಬಾತನನ್ನು ಗುರುವಾರ ಬೆಳಗಿನ ಜಾವ ಬರ್ಬರವಾಗಿ ಕೊಲೆಮಾಡಿ ಆರೋಪಿಗಳು ಪರಾರಿಯಾಗಿದ್ದರು.



ವ್ಯಕ್ತಿಯ ಕುತ್ತಿಗೆಯ ಬಲಭಾಗದಲ್ಲಿ ಮತ್ತು ಹೊಟ್ಟೆಯ ಎಡಭಾಗದಲ್ಲಿ ಹಲವು ಬಾರಿ ಹರಿತವಾದ ಆಯುಧದಿಂದ ಚುಚ್ಚಿ ಕೊಲೆ ಮಾಡಿರುತ್ತಾರೆಂದು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲೆ ಬೆನ್ನಲ್ಲೆ ಎಸ್.ಪಿ. ಶ್ರೀಹರಿಬಾಬು ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಟಿ.ಮಂಜುನಾಥ, ಗ್ರಾಮೀಣ ಠಾಣೆ ಮತ್ತು ನಗರಠಾಣೆ ನೇತೃತ್ವದಲ್ಲಿ ತಂಡ ರಚಿಸಿ ಆರೋಪಿ ಪತ್ತೆಗೆ ಬಲೆ ಬೀಸಿದ್ದರು. ಪ್ರಕರಣ ನಡೆದು 12 ಗಂಟೆಯೊಳಗೆ ಆರೋಪಿ ತಳವಾರ ಕೇರಿಯ ಅಣ್ಣಪ್ಪ(24) ತಂದೆ ಹನುಮಪ್ಪ ಈತನನ್ನು ಪೊಲೀಸರು ಪತ್ತೆ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎಂದು ಎಸ್ಪಿ ಶ್ರೀಹರಿಬಾಬು ತಿಳಿಸಿದ್ದಾರೆ.

ಆರೋಪಿ ಪತ್ತೆಮಾಡಿದ ಡಿವೈಎಸ್ಪಿ ಮಂಜುನಾಥ ಟಿ., ಗ್ರಾಮೀಣ ಠಾಣೆ ಪಿಐ ಗುರುರಾಜ ಕಟ್ಟಿಮನಿ, ನಗರಠಾಣೆ ಪಿಐ ಲಖನ್ ಆರ್ ಮಸಗುಪ್ಪಿ ಹಾಗೂ ಸಿಬ್ಬಂದಿ ಕಾರ್ಯಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿ ಶ್ಲಾಘಿಸಿದ್ದಾರೆ.

## ಸ್ಟುಡೆಂಟ್ ಕಾಲಂ

# ದೂರವಾದ ಗೆಳೆಯರು



ಒಂದು ದಿನ ಭೂಮಿಯಲ್ಲಿ ವಾಸಿಸುವ ಶ್ರೀಮಂತ ಹುಡುಗ ರಾಜ ಮತ್ತು ಬಡ ಹುಡುಗ ತೇಜ ತಮ್ಮ ತಮ್ಮ ಮನೆಯ ಅಂಗಳದಲ್ಲಿ ಚಂದ್ರನನ್ನು ನೋಡುತ್ತಿದ್ದರು. ಅವರಿಬ್ಬರೂ ಚಂದ್ರನ ಮೇಲೆ ಹೋಗುವ ಕನಸು ಕಾಣುತ್ತಿದ್ದರು. ಆಗ ಇದ್ದಕ್ಕಿಂದಂತೆ ಒಂದು ಅದ್ಭುತವಾದ ಬೆಳಕಿನ ಕಿರಣ ಅವರ ಬಳಿ ಬಂದಿತು. ಇಬ್ಬರಿಗೂ ಆಶ್ಚರ್ಯವಾಯಿತು. ಆ ಬೆಳಕಿನ ಕಿರಣ ಅವರನ್ನು ಚಂದ್ರನ ಮೇಲೆ ಕೊಂಡೊಯಿತು. ಚಂದ್ರನ ಮೇಲಿನ ಜಗತ್ತನ್ನು ಕಂಡು ಬೆರಗಾದರು. ಅಲ್ಲಿನ ಮನೆಗಳು ಆಲೂ ಬಣ್ಣದ ಮೋಡಗಳಿಂದ ಮಾಡಲ್ಪಟ್ಟಿದ್ದವು. ಗಿಡಗಳಲ್ಲಿ ಬೆಳ್ಳಿಯ ಬಣ್ಣದ ಹೂವುಗಳನ್ನು ಬಿಡುತ್ತಿದ್ದವು. ರಾಜ ಮತ್ತು ತೇಜ ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡರು. ಅಲ್ಲಿನ ಜನರೊಂದಿಗೆ ಸ್ನೇಹ ಬೆಳೆಸಿಕೊಂಡರು. ಅವರು ಚಂದ್ರನ ಮೇಲೆ ಆಟಗಳನ್ನು ಆಡಿದರು. ಅಲ್ಲಿನ ರುಚಿಕರವಾದ ಆಹಾರವನ್ನು ಸವಿದರು. ಆದಾಗ್ಯೂ ಅವರಿಗೆ ಭೂಮಿಯ ನೆನಪು ಕಾಡುತ್ತಿತ್ತು. ಅವರು ಭೂಮಿಯನ್ನು ತುಂಬಾ ಮಿಸ್ ಮಾಡಿಕೊಂಡಿದ್ದರು.

ಒಂದು ದಿನ ಅವರು ಒಂದು ರಹಸ್ಯ ಕಂಡುಕೊಂಡರು. ಚಂದ್ರನ ಮೇಲೆ ವಾಸಿಸುವ ಜನರಿಗೆ ಭೂಮಿಯ ಮಣ್ಣಿನ ಸುವಾಸನೆ ಗೊತ್ತಿರಲಿಲ್ಲ. ಅವರು ಭೂಮಿಯ ಮೇಲಿನ ಹಸಿರು ಗಿಡಗಳನ್ನು ನೋಡಿರಲಿಲ್ಲ. ರಾಜ ಮತ್ತು ತೇಜ ಅಲ್ಲಿನ ಜನರಿಗೆ ಭೂಮಿಯ ಬಗ್ಗೆ ಹೇಳಿದರು. ಅವರು ಭೂಮಿಯ ಮೇಲಿನ ಸುಂದರವಾದ ಸ್ಥಳಗಳನ್ನು, ವಿವಿಧ ರೀತಿಯ ಆಹಾರಗಳನ್ನು ಮತ್ತು ವಿಭಿನ್ನ ಜನರ ಬಗ್ಗೆ ವಿವರಿಸಿದರು. ಚಂದ್ರನ ಮೇಲಿನ ಜನರು ಭೂಮಿಯ ಬಗ್ಗೆ ತುಂಬಾ ಕುತೂಹಲ ಹೊಂದಿದ್ದರು. ಅವರು ರಾಜ ಮತ್ತು ತೇಜರೊಂದಿಗೆ ಭೂಮಿಗೆ ಬರಲು ನಿರ್ಧರಿಸಿದರು. ಒಂದು ದಿನ ಅವರೆಲ್ಲರೂ ಒಟ್ಟಾಗಿ ಭೂಮಿಯ ಭೂಮಿಗೆ ಮರಳಿದರು. ಚಂದ್ರನ ಮೇಲಿನ ಜನರು ಭೂಮಿಯ ಸೌಂದರ್ಯವನ್ನು ನೋಡಿ ಬೆರಗಾದರು. ನಾಲ್ಕಾರು ಭೂಮಿಯನ್ನೆಲ್ಲಾ ಸುತ್ತಾಡಿದರು. ಇಲ್ಲಿನ ಹಳ್ಳ, ಕೆರೆ, ನದಿ, ಸಾಗರ, ಸಮುದ್ರ, ಗುಡ್ಡ, ಬೆಟ್ಟ, ಕಾಡು, ಕಣಿವೆ ಮುಂತಾದವುಗಳನ್ನು ನೋಡಿ ಆನಂದಿಸಿದರು. ನಂತರ ಪುನಹ ತಮ್ಮ ನಾಡಿಗೆ ಮರಳಿದರು. ಅಂದಿನಿಂದ ರಾಜ ಮತ್ತು ತೇಜ ಚಂದ್ರನ ಮೇಲೆ ತಮ್ಮ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರು. ಅವರು ಆಗಾಗ ಭೂಮಿ ಮತ್ತು ಚಂದ್ರನ ನಡುವೆ ಪ್ರಯಾಣಿಸುತ್ತಿದ್ದರು.

ಹೀಗೆ ಭೂಮಿ ಮತ್ತು ಚಂದ್ರನ ನಡುವೆ ಹೋಗುವ ಸಂಪರ್ಕ ಇದ್ದಾಗ ಒಂದು ದಿನ ರಾಜ ಮತ್ತು ತೇಜ ಇಬ್ಬರಿಗೂ ಮನಸ್ತಾಪ ಉಂಟಾಯಿತು. ಏಕೆಂದರೆ ಚಂದ್ರನ ಮೇಲಿರುವ ಸ್ನೇಹಿತರು ನನ್ನನ್ನು ಕರೆದಿದ್ದಾರೆ ಎಂದು ರಾಜ ಮತ್ತು ನನ್ನ ಕರೆದಿದ್ದಾರೆ ಎಂದು ತೇಜು ಇಬ್ಬರೂ ಜಗಳವಾಡಿದರು. ಜಗಳದ ನಂತರೂ ಇಬ್ಬರೂ ಬೇರೆ ಬೇರೆಯಾದರು. ಆಗ ಯಾರೂ ಚಂದ್ರನಲ್ಲಿಗೆ ಹೋಗಲಿಲ್ಲ. ಇದರಿಂದಾಗಿ ಚಂದ್ರ ಮತ್ತು ಭೂಮಿಗೆ ಸಂಪರ್ಕ ಕಡಿತವಾಯಿತು. ಚಂದ್ರನ ಮೇಲಿರುವ ಜನರು ರಾಜ ಮತ್ತು ತೇಜರನ್ನು ಒಂದು ಮಾಡಲು ಪ್ರಯತ್ನಪಟ್ಟರು. ಆದರೂ ಇಬ್ಬರು ಮಾತನಾಡಲಿಲ್ಲ. ಯಾರ ಮಾತನ್ನೂ ಕೇಳಲಿಲ್ಲ. ಕೊನೆಗೆ ಇಬ್ಬರೂ ಪರಸ್ಪರ ದೂರವಾದರು.

**– ಕೆ. ಸಂಜಯ್. 9ನೇ ತರಗತಿ.**
**ಸರ್ಕಾರಿ ಪ್ರೌಢಶಾಲೆ ಬಸರಕೋಡು, ಹ.ಬೊ.ಹಳ್ಳಿ (ತಾ)**

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

### ಕಲಿತ ವಿಷಯವನ್ನು ಮತ್ತೊಬ್ಬರಿಗೆ ಸರಳವಾಗಿ ಹೇಳಿಕೊಡಿ, ನಿಮ್ಮೊಳಗಾದ ಬದಲಾವಣೆ ಗಮನಿಸಿ

# ಶಾಲಾ ಪರೀಕ್ಷೆ ವರ್ಸಸ್ ಜೀವನದ ಪರೀಕ್ಷೆ

ಇನ್ನೇನು ಕೆಲವೇ ದಿನಗಳಲ್ಲಿ ಪರೀಕ್ಷೆಗಳು ಪ್ರಾರಂಭವಾಗುತ್ತವೆ.... ಮನೆ ಮನೆಗಳಲ್ಲೂ ಬಿಸಿಯಾದ ವಾತಾವರಣ. ಟಿವಿ ವೀಕ್ಷಣೆ ಮತ್ತು ಮೊಬೈಲ್ ಗಳಿಗೆ ಕಡಿವಾಣ, ಹೊರಗಿನ ಸುತ್ತಾಟಗಳು ಬಂದ್, ಇದುವರೆಗೂ ಹಾಜರಾಗುತ್ತಿದ್ದ ಪಠ್ಯೇತರ ಚಟುವಟಿಕೆಗಳ ತರಗತಿಗಳಿಗೆ ಕಳಿಸುವುದನ್ನು ಕೂಡ ನಿಲ್ಲಿಸಿ ಬಿಡುವ ಪಾಲಕರು.... ಒಟ್ಟಿನಲ್ಲಿ ಅಘೋಷಿತ ಬಂದ್‌ನ ವಾತಾವರಣ. ಡೋಂಟ್ ಡು ದಿಸ್, ಡೋಂಟ್ ಡು ಥಟ್ ಎಂಬ ಪಾಲಕರ ಆಜ್ಞೆಗಳಿಗೆ ಮಕ್ಕಳು ಹೂ ಆರ್ ಯು ಟು ಟೆಲ್ ಮಿ ದಾಟ್...ಇಟ್ಸ್ ಮೈ ಲೈಫ್ ಎಂದು ಮರು ಉತ್ತರ ನೀಡುವ... ಕೊನೆಗೆ ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ದೂಷಿಸುವುದು ಪ್ರತಿ ಮನೆಗಳಲ್ಲಿ ನಡೆಯುತ್ತಿರುತ್ತದೆ.

'ಯುದ್ಧಕಾಲೇ ಶಸ್ತ್ರಾಭ್ಯಾಸ' ಎಂಬಂತೆ ಮೈಚಳಿ ಕೊಡವಿಕೊಂಡು ಪಾಲಕರು, ಶಿಕ್ಷಕರು ಎದ್ದೇಳುವರು. ಪರೀಕ್ಷೆ ಬಂತು ಓದಿಕೊಳ್ಳಿ ಎಂದು ತಂದೆ ತಾಯಿಯರ ವರಾತ, ಮಕ್ಕಳ ಅವಗಣನೆ, ಶಾಲೆಯಲ್ಲಿ ಎಲ್ಲ ಪಾಠಗಳು ಪ್ರಶ್ನೋತ್ತರಗಳು ಪುನರಾವರ್ತನೆಯಾಗಿ ಮಕ್ಕಳು ಓದಿ ಓದಿ ರೋಸಿ ಹೋಗುವುದರಲ್ಲಿ ಸಂಶಯವೇ ಇಲ್ಲ. ಮತ್ತೆ ಕೆಲವೊಮ್ಮೆ ಓದಿದ್ದನ್ನು ಮರೆಯುತ್ತಾರೆ ಕೂಡ. ಇದುವೇ ಸಮಸ್ಯೆಯ ಮೂಲವಾಗಿ ಕಾಡುತ್ತದೆ.

ಪರೀಕ್ಷೆಯಲ್ಲಿ ಪಡೆಯುವ ಅಂಕಗಳು ನಮ್ಮ ಬದುಕಿನ ದಾರಿಯನ್ನು ಸ್ವಲ್ಪಮಟ್ಟಿಗೆ ನಿರ್ದೇಶಿಸಿದರೂ ಅವುಗಳೇ ಮುಖ್ಯವಾದ ಮಾನದಂಡ ಗಳಲ್ಲ ಎಂಬ ಅರಿವಿದ್ದರೂ ಕೂಡ ಬಾಲ್ಯದಿಂದಲೇ ಮಕ್ಕಳ ಮೇಲೆ ಅಂಕ ಗಳಿಕೆಯ ಕುರಿತು ವಿಪರೀತ ಒತ್ತಡವನ್ನು ಪಾಲಕರು, ಶಿಕ್ಷಕರು ಸುತ್ತಲ ಸಮಾಜದ ಜನರು ಹೇರುತ್ತಾರೆ.

ಓರ್ವ ವ್ಯಕ್ತಿಯ ಜಾಣ್ಮೆಯನ್ನು ಆತನ ಅಂಕಪಟ್ಟಿಯಿಂದ ನಿರ್ಧರಿಸಲು ಸಾಧ್ಯವಿಲ್ಲ... ಓದದೇ ಇದ್ದರೆ ಒಳ್ಳೆಯ ಉದ್ಯೋಗ ಸಿಗುವುದಿಲ್ಲ ಎಂಬುದು ಎಷ್ಟು ನಿಜವೋ ಓದದೆ ಇದ್ದವರು ಕೂಡ ಬದುಕಿನಲ್ಲಿ ಯಶಸ್ವಿಯಾಗಲು ಸಾಧ್ಯ ಎಂಬುದಕ್ಕೆ ನಮಗೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆದರೆ ನಿಜವಾಗಿ ಜಾಣ್ಮೆ ಎಂಬುದು ವ್ಯಕ್ತಿಯು ಕಾಲ ಕಾಲಕ್ಕೆ ತನ್ನಲ್ಲಿ ಹೆಚ್ಚಿಸಿಕೊಳ್ಳುವ ಜ್ಞಾನದ ಅನುಭವ ಎಂದರೆ ತಪ್ಪಿಲ್ಲ. ಹಾಗಾದರೆ ಇಂತಹ ಜಾಣ್ಮೆಯನ್ನು ಹೆಚ್ಚಿಸಿಕೊಳ್ಳಲು ಯಾವಾಗಲೂ ಜಾಣ್ಮೆಯನ್ನು ಕಾಪಿಟ್ಟುಕೊಳ್ಳಲು ಕೆಲವು ಸಲಹೆಗಳು ಇಂತಿವೆ. ಇದು ಲಿಂಗಬೇಧ, ವಯೋ ಬೇಧ ಗಳಿಲ್ಲದೆ ಎಲ್ಲರಿಗೂ ಅನ್ವಯಿಸುತ್ತದೆ.

ಪ್ರತಿದಿನ ರಾತ್ರಿ ಮಲಗುವ ಮುನ್ನ ಆ ದಿನ ಮಾಡಿದ ಕೆಲಸಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ. ಓದಿದ,



ಕೇಳಿದ ವಿಷಯಗಳನ್ನು, ಬರೆದಿಟ್ಟುಕೊಂಡ ಮಾತುಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳುವ ಮೂಲಕ ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಮಾಡದೇ ಇರುವ ವಿಷಯಗಳ ಕುರಿತು ಪಶ್ಚಾತಾಪ ಪಡುವುದಕ್ಕಿಂತ ನಾಳೆ ಏನು ಮಾಡಬೇಕು ಎಂಬುದರ ಕುರಿತು ಚಿಂತಿಸಿ ಆ ನಿಟ್ಟಿನಲ್ಲಿ ಯಶಸ್ವಿಯಾಗಿ.

ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುವ ಜನರೊಂದಿಗೆ ಬರೆಯಿರಿ... ನಿಮ್ಮಂತೆ ಯೋಚಿಸುವ ಜನರಿಗಿಂತ ವಿಭಿನ್ನವಾದ ಜನರೊಂದಿಗಿನ ಮಾತುಕತೆ, ಓದುವ, ಬರೆಯುವ ಹವ್ಯಾಸಗಳು ನಿಮ್ಮಲ್ಲಿ ಪ್ರಶ್ನೆಯನ್ನು ಕೇಳುವ, ಉತ್ತರಗಳನ್ನು ಹುಡುಕುವ, ವೈವಿಧ್ಯತೆಯನ್ನು ಅರಸುವ ಕ್ರಿಯೆಗಳಲ್ಲಿ ಸಹಾಯಕವಾಗುತ್ತದೆ. ಇದು ನಿಮ್ಮ ಜ್ಞಾನವಿಕಾಸಕ್ಕೆ ಸಹಕಾರಿ.

ಪ್ರತಿದಿನ ಒಂದೈದು ನಿಮಿಷ ಸುಮ್ಮನೆ ಕುಳಿತು ಮನದ ವಿಚಾರಗಳನ್ನು ತಹಬಂದಿಗೆ ತರಲು ಪ್ರಯತ್ನಿಸಿ. ಶಾಂತವಾದ ಕೊಳದಲ್ಲಿ ತಿಳಿಯಾದ ನೀರು ಕಾಣುವಂತೆ ಶಾಂತವಾದ ಮನಸ್ಥಿತಿಯಲ್ಲಿ ಹೊಸ ವಿಚಾರಗಳು, ಗೋಜಲುಗಳಿಗೆ ಉತ್ತರಗಳು, ಚಿಂತನೆಗೆ ಅವಕಾಶ ದೊರೆಯುತ್ತದೆ. ಇದೊಂದು ನಿಧಾನವಾದರೂ ನಿರಂತರವಾದ ಬೆಳವಣಿಗೆಯ ಕ್ರಿಯೆ... ಇಷ್ಟು ಸಾಕಲ್ಲವೇ ನಮ್ಮ ಜಾಣ್ಮೆಯನ್ನು ಹೆಚ್ಚಿಸಿಕೊಳ್ಳಲು!

ಹಿಂತಿರುಗಿ ಯೋಚಿಸಿ.... ಯಾವುದೇ ಒಂದು ಗುರಿಯನ್ನು ಬದುಕಿನಲ್ಲಿ ಇಟ್ಟುಕೊಂಡಾಗ ಅದರ ಅಂತಿಮ ಫಲಿತಾಂಶದ ಕುರಿತು ಹಲವಾರು ಮಾರ್ಗಗಳ ಮೂಲಕ ತಲುಪುವ ಕುರಿತು ಯೋಚಿಸಿ. ಸಾಧ್ಯಾಸಾಧ್ಯತೆಗಳ ಕುರಿತು ಯೋಜಿಸಿ ಇದು ನಿಮ್ಮ ತರ್ಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಒಂದೊಳ್ಳೆಯ ಫಲಿತಾಂಶವನ್ನು ಪಡೆಯಬೇಕಾದರೆ ಯೋಜನೆಯ ಆರಂಭದ ದಿನದಿಂದಲೂ ನಾವು ಕಾರ್ಯನಿರ್ವಹಿಸ ಬೇಕು ಎಂಬ ಅರಿವು ಮತ್ತು ವಿವಿಧ ರೀತಿಯ ಪ್ರಯತ್ನಗಳ ಕುರಿತ ಅವಗಾಹನೆ ನಮ್ಮನ್ನು ನಾವೇ ಉತ್ತಮಗೊಳಿಸಿಕೊಳ್ಳಲು ಸಹಾಯಕವಾಗುತ್ತದೆ.

ಕಲಿಯಿರಿ ಮತ್ತು ಕಲಿಸಿರಿ... ನೀವು ಕಲಿತ ವಿಷಯವನ್ನು ಬೇರೊಬ್ಬರಿಗೆ ಕಲಿಸುವ ಮೂಲಕ ನಿಮ್ಮ ಕಲಿಕೆಯ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಹೀಗೆ ಉಂಟಾದ ಜ್ಞಾನ ಮನಸ್ಸಿನ ಪದರಗಳೊಳಗೆ ಶಾಶ್ವತವಾಗಿ ನೆಲೆ ನಿಲ್ಲುತ್ತದೆ. ನೀವು ಕಲಿತ ವಿಷಯವನ್ನು ಮತ್ತೊಬ್ಬರಿಗೆ ಸರಳವಾಗಿ ಹೇಳಿಕೊಡಲು ನಿಮಗೆ ಸಾಧ್ಯವಾದರೆ ಆ ವಿಷಯ ನಿಮಗೆ ಅರ್ಥವಾಗಿದೆ ಎಂದು ಅರ್ಥವಲ್ಲವೇ?

ಮೆದುಳಿಗೆ ಆಹಾರ... ಪ್ರತಿದಿನ ಒಂದು ಹೊಸ ವಿಷಯವನ್ನು ಕಲಿಯಿರಿ ನಿರಂತರವಾದ ಕಲಿಕೆಯ ಕ್ರಮ ನಮ್ಮ ಮೆದುಳನ್ನು ಸದಾ ಚುರುಕಾಗಿಸುತ್ತದೆ. ಚಿಕ್ಕ ಮಕ್ಕಳಿಗಂತೂ ಸರಿಯೇ ಸರಿ ದೊಡ್ಡವರಿಗೆ ಪತ್ರಿಕೆಗಳಲ್ಲಿ ಬರುವ ಪದಬಂಧ, ಸುಡೊಕುಗಳನ್ನು ಬಿಡಿಸುವುದು ಅವರ ಮೆದುಳಿನ ಹಸಿವಿಗೆ ಮೇವನ್ನು ಹಾಕಿದಂತೆ. ಪ್ರತಿಯೊಂದು ಹೊಸ ವಿಷಯದ ಕಲಿಕೆ ನಮ್ಮಲ್ಲಿ ನವ ಚೈತನ್ಯವನ್ನು ತರುತ್ತದೆ. ಹೊಸ ಹೊಸ ವಿಷಯಗಳ ಕುರಿತು ನೀವು ಯೋಚಿಸಿದಂತೆಲ್ಲ ನಿಮ್ಮ ಮೆದುಳನ್ನು ಸಾಣೆ ಹಿಡಿದಂತಾಗುತ್ತದೆ. ವಿಷಯದ ಕುರಿತು ಆಸಕ್ತಿ ಹೆಚ್ಚಾಗಿ ಮನಸ್ಸು ಸದಾ ಕ್ರಿಯಾಶೀಲವಾಗಿರುತ್ತದೆ.

ನಾವೆಲ್ಲರೂ ಒಂದು ಸುರಕ್ಷಾ ಕವಚದ ಒಳಗೆ ಕೆಲಸ ಮಾಡಲು ಇಚ್ಛೆಸುತ್ತೇವೆ... ನಮ್ಮ ಸುರಕ್ಷಾ ವಲಯದಿಂದ ಹೊರಗೆ ಅಪಾರಜ್ಞಾನದ, ಅವಕಾಶಗಳ ಭಂಡಾರ ನಮಗಾಗಿ ಕಾಯುತ್ತಿರುತ್ತದೆ. ಪುಟ್ಟ ಹಕ್ಕಿಯೊಂದು ತನ್ನನ್ನು ರಕ್ಷಣೆ ಎಂಬ ಬಂಧನದಲ್ಲಿಟ್ಟ ಚಿಪ್ಪಿನಿಂದ ತನ್ನೆಲ್ಲಾ ಶ್ರಮವನ್ನು ಹಾಕಿ ಹೊರಬರದ ಹೊರತು ಅದರ ದೈಹಿಕ ಅಂಗಗಳು ಬಲಿಷ್ಠವಾಗುವುದಿಲ್ಲ... ಹಾಗೆ ಹೊರಬಂದ ಹಕ್ಕಿಗೆ ವಿಶಾಲವಾದ ಪ್ರಪಂಚ ಹಲವರು ಸವಾಲುಗಳನ್ನು ಒಡ್ಡುತ್ತಾ ಎದುರುಗೊಳ್ಳುತ್ತದೆ... ಅಂತಹ ಒಂದೊಂದೇ ಸವಾಲುಗಳನ್ನು ಎದುರಿಸಿ ಕೆಲವೇ ತಿಂಗಳು ವರ್ಷಗಳ ಕಾಲ ಬದುಕುವ ಪುಟ್ಟ ಹಕ್ಕಿ ಬದುಕಿನ ಹೋರಾಟ ನಡೆಸುವುದಾದರೆ ದಶಕಗಳ ಕಾಲ ಬದುಕುವ ನಾವು ನಮ್ಮ ಸುರಕ್ಷತಾ ವಲಯದಿಂದ ಹೊರಬರಲು ಪ್ರಯತ್ನಿಸಲೇಬೇಕಲ್ಲವೇ.

ಚಿಕ್ಕಂದಿನಲ್ಲಿ ಅಮ್ಮನ ಕೈಹಿಡಿದು ನಡೆದಿದ್ದೇವೆ ನಿಜ... ದೊಡ್ಡವರಾದಂತೆ ಅಮ್ಮನ ಕೈ ಬಿಟ್ಟು ಸ್ವತಂತ್ರವಾಗಿ ನಡೆಯಲು, ಮನೆಗಿಂತ ಹೊರತಾದ ಹೊಸ ಪ್ರಪಂಚದಲ್ಲಿ ಕಾಲಿಡಲು ಮೊದಮೊದಲು ಆತಂಕವಾದರೂ ಪ್ರಯತ್ನಿಸುವುದಿಲ್ಲವೇ? ಪ್ರಯತ್ನಿಸಿ ಯಶಸ್ವಿಯಾಗುವುದಿಲ್ಲವೇ? ಹಾಗೆಯೇ ಪ್ರತಿ ಹೊಸ ಸವಾಲನ್ನು ಎದುರಿಸುವಂತೆಯೇ ಹೊಸ ವಿಷಯಗಳನ್ನು ಕಲಿಯಲು ಪ್ರಯತ್ನಿಸಬೇಕು. ಸಾಮಾನ್ಯವಾಗಿ ನಾವು ಬಳಸುವ ಕೈಯನ್ನು ಹೊರತುಪಡಿಸಿ ಮತ್ತೊಂದು ಕೈಯಿಂದ ಬರೆಯಲು ಮತ್ತಿತರ ಕೆಲಸಗಳಿಗೆ ಬಳಸಬೇಕು. ಪ್ರತಿನಿತ್ಯ ಓಡಾಡುವ ದಾರಿಯನ್ನು ಬಿಟ್ಟು ಬೇರೆ ಬೇರೆ ದಾರಿಗಳನ್ನು ಬಳಸಬೇಕು. ನಿಯಮಿತವಾಗಿ ಕೈಗೊಳ್ಳುವ ಕೆಲಸಗಳನ್ನು ತುಸು ಭಿನ್ನವಾಗಿ ಮಾಡಲು ಪ್ರಯತ್ನಿಸಬೇಕು. ಹೀಗೆ ನಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡಾಗ ಬಹಳಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆಯಲ್ಲದೆ ಹೊಸ ಹೊಸ ವಿಷಯಗಳ ಕಲಿಕೆ ನಮ್ಮನ್ನು ಸದಾ ಕ್ರಿಯಾಶೀಲರನ್ನಾಗಿಸುತ್ತದೆ.

ಅಂತಹ ಕ್ರಿಯಾಶೀಲತೆಯನ್ನು ಬದುಕಿನಲ್ಲಿ ಪಡೆಯಲು ಪರೀಕ್ಷೆಗಳ ಮಾನದಂಡ ಬೇಕಿಲ್ಲ. ಮಕ್ಕಳು ಹದಿಹರೆಯದವರು ಮುದುಕರು ಎನ್ನದೆ ಆಬಾಲವೃದ್ಧರಾದಿಯಾಗಿ ಎಲ್ಲರಲ್ಲೂ ಅಂತಹ ಒಂದು ಭಾವ ಉದ್ಭವಿಸಲಿ.

# ಮನುಷ್ಯ ಸಂಬಂಧ-ಆತ್ಮೀಯ ಬಂಧ

ಮನುಷ್ಯನು ಸಮಾಜಜೀವಿ. ಆತ ಸಮಾಜದಲ್ಲಿ ಇತರರೊಂದಿಗೆ ಹೊಂದಿಕೊಂಡು ಬಾಳುವುದು ಅನಿವಾರ್ಯ ಮತ್ತು ಅವಶ್ಯ. ಆಚಾರ–ವಿಚಾರಗಳು, ರೂಢಿ–ಸಂಪ್ರದಾಯಗಳು ಮನುಷ್ಯ ಮನುಷ್ಯರಲ್ಲಿ ಸಂಬಂಧಗಳನ್ನು ಬೆಳೆಸುವಲ್ಲಿ ಪೂರಕವಾಗಬೇಕೇ ಹೊರತು ಮಾರಕವಾಗಬಾರದು. ಮುಖ್ಯವಾಗಿ ಯಾವುದೇ ಸಂಬಂಧಗಳಲ್ಲಿ ಪ್ರೀತಿ, ನಂಬಿಕೆ ಇರಬೇಕೇ ವಿನಃ ಸ್ವಾರ್ಥ ಭಾವನೆಗಳಿರಬಾರದು. ಆಗ ಮಾತ್ರ ಸಮಾಜ ಪ್ರಗತಿ ಪಥದಲ್ಲಿ ಮುನ್ನಡೆಯಬಲ್ಲದು.

ಮನುಷ್ಯ ಸಂಬಂಧಗಳು ಮನೆಯಿಂದಲೆ ಪ್ರಾರಂಭವಾಗುತ್ತವೆ. ಮಕ್ಕಳೊಡನೆ ತಂದೆತಾಯಿಗಳ ಸಂಬಂಧ ವಾತ್ಸಲ್ಯಮಯವಾಗಿ ಪೋಷಿಸುತ್ತದೆ. ಮಕ್ಕಳಿಗೆ ಪ್ರೀತಿಯ ಪಿತೃಭಕ್ತಿ, ಮಾತೃಭಕ್ತಿ ಸದಾ ಹಚ್ಚ ಹಸಿರಾಗಿರಬೇಕು. ಇದನ್ನೇ ಮಾತೃದೇವೋಭವ ಮತ್ತು ಪಿತೃದೇವೋಭವ ಎಂದು ಕರೆಯುತ್ತೇವೆ. ಅದೇರೀತಿ ಶಾಲಾ ಕಾಲೇಜುಗಳಲ್ಲಿ ಗುರುಭಕ್ತಿ ವಿದ್ಯಾರ್ಥಿಗಳಲ್ಲಿ ಇರಬೇಕಾದುದು ಅಗತ್ಯ. ಉತ್ತಮ ಗುರುಗಳಿಗೆ ಉತ್ತಮ ಶಿಷ್ಯ ಸಿಗುವುದು ದುರ್ಲಭ. ಗುರುಶಿಷ್ಯರಲ್ಲಿ ಒಬ್ಬರೊಬ್ಬರಲ್ಲಿ ಅರ್ಥಪೂರ್ಣತೆ ಚರ್ಚೆ ಇದ್ದರೆ ತುಂಬಾ ಅನುಕೂಲ. ಗುರುಶಿಷ್ಯರ ಸಂಬಂಧ ಚೆನ್ನಾಗಿದ್ದಷ್ಟೂ ಅದು ಗಟ್ಟಿಯಾಗಿ ಮುಂದೆ ಯಾವುದೇ ಸಂದರ್ಭದಲ್ಲೂ ನೆರವಿಗೆ ಬರುತ್ತದೆ. ಇಬ್ಬರಲ್ಲೂ ಹಣ–ಅಹಂಕಾರದ ಆಸೆಗಳಿರಬಾರದು ಹಾಗೂ ಸ್ವಾಭಿಮಾನವಿರಬಾರದು. ಶಿಷ್ಯ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಗುರುವು ನೀಡಿದಾಗ ಶಿಷ್ಯನಲ್ಲಿ ಗುರುವಿನ ಕುರಿತಾದ ಸಂಬಂಧ ಇನ್ನಷ್ಟು ಅರಳುತ್ತದೆ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಅದೇರೀತಿ ಗುರು ಹೇಳಿದ ಪ್ರತಿಯೊಂದು ಕೆಲಸ ಕಾರ್ಯ ಗಳನ್ನು ಅತ್ಯಂತ ನಿಷ್ಠೆ ಮತ್ತು ಶ್ರದ್ಧೆಯಿಂದ ಶಿಷ್ಯ ಮಾಡಿ ಮುಗಿಸಿದರೆ ಗುರುವಿಗೂ ಶಿಷ್ಯನಲ್ಲಿ ಉತ್ತಮ ಸಂಬಂಧ ನೆಲೆಯೂರಾಗುವುದರಲ್ಲಿ ಸಂದೇಹವಿಲ್ಲ. ಇಬ್ಬರಲ್ಲು ತದ್ವಿರುದ್ಧ ವಿಚಾರಗಳಿದ್ದಲ್ಲಿ ಸೂಕ್ತ ಸಂದರ್ಭದಲ್ಲಿ ಚರ್ಚೆ ಮಾಡಿ ಪರಿಹರಿಸಿ ಕೊಳ್ಳಬೇಕೇ ಹೊರತು ಹಾಗೆ ಮನದಲ್ಲಿಟ್ಟುಕೊಳ್ಳುವುದು ಸರಿಯಲ್ಲ. ಗೆಳೆಯರಲ್ಲಿ ಗೆಳೆತನದ ಸಂಬಂಧವೂ ಸರಿಯಾದ ಕ್ರಮದಲ್ಲಿರಬೇಕು. ಅರ್ಥಮಾಡಿಕೊಂಡ ಗೆಳೆಯರಲ್ಲಿ ಮನಸ್ಸು ಶುದ್ಧವಾಗಿದ್ದು ಹೃದಯ ವೈಶಾಲ್ಯತೆ ಇರಬೇಕು. ಅನ್ಯಥಾ ಭಾವನೆಗಳಿಗೆ ಸ್ವಲ್ಪವೂ ಜಾಗ ಇರಬಾರದು.

ಕೆಲವೊಮ್ಮೆ ಹಣದ ವಿಷಯ ಅಥವಾ ಬುದ್ಧಿವಂತಿಕೆಯ ವಿಷಯ ಬಂದಾಗ ಸಂಬಂಧಗಳಲ್ಲಿ ವ್ಯತ್ಯಾಸ ಬರಬಹುದು. ಅದನ್ನು ಜಾಣತನದಿಂದ ಪರಿಹರಿಸಿಕೊಳ್ಳಬಹುದು. ಯಾರೂ ತಮತಮಗೆ ಹೆಚ್ಚು ಎಂಬ ಭಾವನೆ ಬಂದಾಗ ಅದನ್ನು ಆದಷ್ಟು ಸಂಯಮದಿಂದ ತಳ್ಳಿ ಹಾಕಬೇಕು. ಪ್ರಪಂಚದಲ್ಲಿ ಒಬ್ಬರು ಇದ್ದ ಹಾಗೆ ಇನ್ನೊಬ್ಬರು ಇರಲಾರರು. ಯಾವುದೇ ಪ್ರತಿಭೆಯಲ್ಲಿ ಒಬ್ಬರಿಗಿಂತ ಒಬ್ಬರು ಹೆಚ್ಚುಕಡಿಮೆ ಇರುತ್ತಾರೆ. ಅದನ್ನು ಒಬ್ಬರಿಗೊಬ್ಬರು ಗೌರವಿಸಬೇಕು. ಸ್ನೇಹ ಸಂಬಂಧವೆಂಬುದು ಎರಡು ತುದಿಗಳಿದ್ದ ರೇಷ್ಮೆ ದಾರವಿದ್ದ ಹಾಗೆ. ಎರಡೂ ತುದಿಗಳನ್ನು ಸ್ನೇಹಿತರು ಗಟ್ಟಿಯಾಗಿ ಹಿಡಿದುಕೊಂಡಿದ್ದರೂ ಜೋರಾಗಿ ಜಗ್ಗಾಡಬಾರದು.

ತಮ್ಮ ತಮ್ಮ ಅಹಂನಿಂದ ಜೋರಾಗಿ ಜಗ್ಗಿದರೆ ರೇಷ್ಮೆದಾರ ತುಂಡಾಗುತ್ತದೆ. ತುಂಡಾದ ದಾರ ಮತ್ತೆ ಜೋಡಿಸುವುದಕ್ಕೆ ಬೇರೆಯವರ ಪ್ರವೇಶವಾಗುತ್ತದೆ. ದಾರಕ್ಕೆ ಅನಿವಾರ್ಯವಾಗಿ ಗಂಟು ಹಾಕಲಾಗುತ್ತದೆ. ಗಂಟು ಮತ್ತೆಮತ್ತೆ ಕೈಗೆ ಅಡ್ಡಿಯಾಗಿರುತ್ತದೆ. ಹಾಗಾಗಿ ಮುಂದಾಲೋಚನೆ ಮಾಡಿ ಹೀಗಾಗದಂತೆ ಸ್ನೇಹ ಸಂಬಂಧ ಯಾವುದೇ ಕಾರಣಕ್ಕೆ ತುಂಡಾಗಲು ಬಿಡಬಾರದು. ಸ್ವಲ್ಪದರಲ್ಲಿಯೇ ಎಚ್ಚೆತ್ತುಕೊಂಡು ಒಬ್ಬರಿಗೊಬ್ಬರು ಪ್ರೀತಿ ವಿಶ್ವಾಸದಿಂದ ಬಾಳುವಂತಾಗಬೇಕು.

ಇಂದು ಗ್ರಾಮ ನಗರಗಳ ಬದುಕು ಭಿನ್ನವಾಗಿ ಸಂಬಂಧಗಳೂ ಬಿರುಕಾಗಿವೆ. ಇದರಿಂದ ಆತ್ಮೀಯತೆ ಮಾಯವಾಗಿವೆ.

ಪಕ್ಕದ ಮನೆಯವರ ಪರಿಚಯವಿಲ್ಲದ ಪಟ್ಟಣಿಗರ ಬಾಳೆತ್ತಣದು?
ದೂರವಿದ್ದರೂ ಹತ್ತಿರದ ಸಂಬಂಧವುಳ್ಳ ಹಳ್ಳಿಗರ ಬಾಳೆತ್ತಣದು?
ಹತ್ತಿರವಿದ್ದು ದೂರ ಸರಿಯುವವರೊಂದು ಕಡೆಗೆ
ದೂರವಿದ್ದರೂ ಹತ್ತಿರ ಬರುವವರಿನ್ನೊಂದು ಕಡೆಗೆ
ಆರ್ಥಿಕ ಅಡಚಣೆಯ ದಳ್ಳುರಿ ಎಬ್ಬಿಸುತ್ತ
ಬೀಸುವ ನಗರೀಕರಣದ ಬಿರುಗಾಳಿಯಿಂದಾಗಿ
ಹತ್ತಿರದ ಸಂಬಂಧ ಕತ್ತರಿಸುತಿಹುದಯ್ಯ
ಸಂಗಮೇಶಪ್ರಿಯ ನಿಡುಮಾಮಿಡಿ ಚನ್ನಬಸವೇಶ್ವರಾ

ಈ ವಚನದ ಮತಿತಾರ್ಥವೇನಂದರೆ: ಹಳ್ಳಿಗಳಲ್ಲಿ ಬೇರೆ ಬೇರೆ ಜಾತಿ, ಮತ, ಪಂಗಡದವರಿದ್ದರೂ ರಕ್ತಸಂಬಂಧವಿದ್ದವರಂತೆ ಆತ್ಮೀಯತೆಯಿಂದ ಅವ್ವ, ಅಪ್ಪ, ಅಣ್ಣ, ಅಕ್ಕ, ತಂಗಿ, ಮಾಮಾ, ಕಾಕಾ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಅಜ್ಜಿ, ಅಜ್ಜ ಇತ್ಯಾದಿ ಸಂಬಂಧವಾಚಕಗಳು ಅನ್ಯೋನ್ಯವಾಗಿವೆ. ಒಬ್ಬರಿಗೊಬ್ಬರು ಪ್ರೀತಿಯಿಂದ ಮಾತಾಡುತ್ತಾರೆ, ಅನ್ಯೋನ್ಯವಾಗಿ ಅಪ್ಪಿಕೊಳ್ಳುತ್ತಾರೆ.




ಆದರೆ ಪಟ್ಟಣದಲ್ಲಿ ಪರಿಸ್ಥಿತಿಯೇ ಬೇರೆ. ಪಕ್ಕದ ಮನೆಯವರೊಂದಿಗೆ ಮಾತಾಡುವುದೇ ಅಪರೂಪ.

ಇನ್ನು ಸಂಬಂಧವಾಚಕಗಳಿಂದ ಕರೆಯುವುದು ದೂರವೇ ಉಳಿದೀತು. ಪಟ್ಟಣದಲ್ಲಿ ತಮ್ಮ ಕೆಲಸವಾಯಿತು ತಾವಾಯಿತು. ಮತ್ತೊಬ್ಬರೊಂದಿಗೆ ಬೆರೆಯುವುದು ಪ್ರೀತಿಯಿಂದ ಮಾತಾಡುವುದು ಇಲ್ಲವೇ ಇಲ್ಲ. ಎಲ್ಲದಕ್ಕೂ ವ್ಯವಹಾರದ ಸಂಬಂಧ ನೋಡುತ್ತಾರೆಯೇ ಹೊರತು ಮಾನವೀಯ ಸಂಬಂಧ ನೋಡುವುದಿಲ್ಲ. ಕಾರಣ ಎಲ್ಲವು ಯಾಂತ್ರಿಕ–ತಾಂತ್ರಿಕ ಜಗತ್ತು. ಜೊತೆಗೆ ಯಾರಿಗೂ ಕ್ಷಣಹೊತ್ತು ಕೂತು ಮಾತಾಡುವ ಸಮಯವೇ ಇಲ್ಲ. ಎಲ್ಲದಕ್ಕೂ ಒತ್ತಡದ ಜೀವನ. ಹೀಗಾಗಿ ಸಂಬಂಧಗಳಿಗೆ ಬೆಲೆಯೇ ಇಲ್ಲವಾಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಕ್ಷಯಮುಕ್ತ ಜಿಲ್ಲೆಗೆ ಸಾರ್ವಜನಿಕರ ಸಹಕಾರ ಅಗತ್ಯ

– ಡಾ. ಶಶೀಧರ್ ಎ.
ಜಿಲ್ಲಾ ಕ್ಷಯರೋಗ ನಿರ್ಮೂಲನ ಅಧಿಕಾರಿಗಳು, ಕೊಪ್ಪಳ.

**ಕ್ಷಯರೋಗ:** ಕ್ಷಯರೋಗ ಹೆಸರೇ ತಿಳಿಸುವಂತೆ ಮಾನವನ ಶರೀರವನ್ನು ಕ್ಷಯಿಸುವ ಮಾರಕ ಖಾಯಿಲೆಯಾಗಿದೆ. ಈ ರೋಗದ ಕುರಿತಾಗಿ ನೂರಾರು ವರ್ಷಗಳ ಹಿಂದಿನ ಗ್ರಂಥಗಳಲ್ಲಿಯೂ ಉಲ್ಲೇಖಗಳಿವೆ. ಕ್ಷಯರೋಗವು ಮಾನವನ ಕೂದಲು ಮತ್ತು ಉಗುರುಗಳ ಹೊರತಾಗಿ ದೇಹದ ಯಾವುದೇ ಭಾಗಗಳಲ್ಲಿ ಸೋಂಕನ್ನು ಉಂಟು ಮಾಡಬಹುದು. 1882 ರಲ್ಲಿ ಮಾರ್ಚ 24 ರಂದು ಡಾ. ರಾಬರ್ಟ್‌ಕಾಕ್ ಎಂಬ ಜರ್ಮನ್ ವಿಜ್ಞಾನಿಯು ಕ್ಷಯರೋಗವನ್ನು ಉಂಟುಮಾಡುವ ಮೈಕೋ ಬ್ಯಾಕ್ಟೀರಿಯಂ ಟ್ಯೂಬರ್ ಕ್ಯೂಲೋಸಿಸ್ ಎಂಬ ಸೂಕ್ಷ್ಮಾಣುವನ್ನು ಕಂಡುಹಿಡಿದಿದ್ದು, ನಂತರ ದಿನಗಳಲ್ಲಿ ರೋಗದ ಪತ್ತೆ ಹಚ್ಚುವಿಕೆ ಮತ್ತು ಚಿಕಿತ್ಸಾ ಕ್ರಮಗಳಲ್ಲಿ ಹಲವು ಆವಿಷ್ಕಾರ ಮತ್ತು ವಿನೂತನ ಪರಿಕರಗಳನ್ನು ಬಳಸಿ ಕ್ಷಯರೋಗ ನಿರ್ಮೂಲನೆಗಾಗಿ ಶ್ರಮಿಸಲಾಗುತ್ತಿದೆ.

ವಿಶ್ವದಲ್ಲಿ ಭಾರತವು ಅತೀ ಹೆಚ್ಚು ಕ್ಷಯರೋಗ ಪ್ರಮಾಣವನ್ನು ಹೊಂದಿದ್ದು, ಜಾಗತಿಕವಾಗಿ ಶೇ. 26ರಷ್ಟು ಕ್ಷಯರೋಗಿಗಳ ತವರೂರಾಗಿರುತ್ತದೆ. ಕ್ಷಯರೋಗದ ಹರಡುವಿಕೆ ಮತ್ತು ಖಾಯಿಲೆಯಾಗಿ ಮಾರ್ಪಾಡುವಿಕೆ ಬಹುಕಾರಣಗಳ ಮೇಲೆ ಆಧಾರಿತವಾಗಿದ್ದರೂ ಹೆಚ್ಚಿನ ಪ್ರಮಾಣವಿರುವುದು ಬಡ ಮತ್ತು ಮಧ್ಯಮವರ್ಗದ ಕುಟುಂಬಗಳಲ್ಲಿ. 2025ರ ವೇಳೆಗೆ ಭಾರತವನ್ನು ಕ್ಷಯಮುಕ್ತವಾಗಿಸುವುದಾಗಿ ಮಾನ್ಯ ಪ್ರಧಾನಮಂತ್ರಿಗಳು 2018ರಲ್ಲಿ ಜಾಗತಿಕ ಮಟ್ಟದಲ್ಲಿ ಘೋಷಿಸಿದ್ದು, ಆ ನಿಟ್ಟಿನಲ್ಲಿ ರಾಷ್ಟ್ರೀಯ ಕಾರ್ಯತಂತ್ರ ಯೋಜನೆ ಮುಖಾಂತರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**ಕ್ಷಯರೋಗದ ಹರಡುವಿಕೆ:** ಕ್ಷಯರೋಗವು ಮೈಕೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯೂಲೋಸಿಸ್ ಎಂಬ ಸೂಕ್ಷ್ಮಾಣುವಿನಿಂದ ರೋಗಿಯು ಕೆಮ್ಮುವುದರಿಂದ ಮತ್ತು ಸೀನುವುದರಿಂದ ಹೊರಬರುವ ತುಂತುರು ಹನಿಗಳಿಂದ (Droplet infection) ಹರಡುತ್ತದೆ. ಸಾಮಾನ್ಯವಾಗಿ ಶ್ವಾಸಕೋಶಗಳಿಗೆ ಹಬ್ಬುವ ಈ ರೋಗವು ದೇಹದ ಇತರ ಭಾಗಗಳಿಗೂ ಹರಡಬಹುದು. ಪ್ರಮುಖವಾಗಿ ಶ್ವಾಸಕೋಶದ ಮತ್ತು ಶ್ವಾಸಕೋಶೇತ್ತರ ಕ್ಷಯ ಎಂದು ವಿಂಗಡಿಸಲಾಗಿದೆ. ಒಬ್ಬ ಸಕ್ರಿಯ ಕ್ಷಯರೋಗಿಯು ಚಿಕಿತ್ಸೆಯನ್ನು ಸೂಕ್ತ ಸಮಯದಲ್ಲಿ ಪಡೆಯದೇ ಇದ್ದಲ್ಲಿ ಒಂದು ವರ್ಷದಲ್ಲಿ ಸುಮಾರು 15 ಜನರಿಗೆ ಈ ಖಾಯಿಲೆಯನ್ನು ಪ್ರಸರಣ ಮಾಡಬಹುದು.

**ಸುಪ್ತಕ್ಷಯ:** ಕ್ಷಯಸೋಂಕನ್ನು ಹೊಂದಿದ್ದು, ಯಾವುದೇ ಕ್ಷಯರೋಗದ ಲಕ್ಷಣವನ್ನು ತಕ್ಷಣದಲ್ಲಿ ಹೊಂದಿರುವುದಿಲ್ಲ. ರೋಗಿಯ ರೋಗನಿರೋಧಕ ಶಕ್ತಿಯು ಕಾರಣಾಂತರಗಳಿಂದ ಕ್ಷೀಣಿಸಿದ ಸಮಯದಲ್ಲಿ ಸಕ್ರಿಯ ಕ್ಷಯರೋಗವು ಉಲ್ಬಣಗೊಳ್ಳುತ್ತದೆ.

**ಕ್ಷಯರೋಗದ ಲಕ್ಷಣಗಳು:** ಎರಡು ವಾರಕ್ಕೂ ಹೆಚ್ಚು ಕೆಮ್ಮು, ಸಂಜೆ ವೇಳೆಯಲ್ಲಿ ಜ್ವರ, ಕಫದಲ್ಲಿ ರಕ್ತ ಬೀಳುವುದು, ಎದೆನೋವು, ತೂಕ ಕಡಿಮೆಯಾಗುವುದು, ರಾತ್ರಿಯಲ್ಲಿ ಬೆವರುವುದು, ಹಸಿವಾಗದಿರುವುದು/ ಆಹಾರ ಸೇರದಿರುವುದು ಮತ್ತು ಕತ್ತು/ ಕಂಕುಳಲ್ಲಿ ಅಥವಾ ದೇಹದ ಇತರೆ ಭಾಗಗಳಲ್ಲಿ ಗಡ್ಡೆಗಳು ಇವು ಕ್ಷಯರೋಗದ ಮುಖ್ಯ ಲಕ್ಷಣಗಳಾಗಿವೆ. ಕ್ಷಯರೋಗವು ಮೂಳೆ, ಗರ್ಭಕೋಶ, ಮೆದುಳು, ಜಠರ, ಕಿಡ್ನಿ, ಯಕೃತ್ ಹಾಗೂ ಇತರೆ ಭಾಗಗಳಿಗೆ ಖಾಯಿಲೆಯನ್ನುಂಟು ಮಾಡಿ ಸಂಬಂಧಿಸಿದ ಅಂಗಗಳ ಖಾಯಿಲೆಯ ಲಕ್ಷಣಗಳನ್ನು ತೋರಪಡಿಸುವುದು.

**ಕ್ಷಯರೋಗದ ಲಸಿಕೆ:** 1951ರಲ್ಲಿ ಕ್ಷಯರೋಗ ತಡೆಗಟ್ಟಲು ಬಿ.ಸಿ.ಜಿ. ಲಸಿಕೆಯನ್ನು ಪ್ರಾರಂಭಿಸಲಾಯಿತು. ಈ ಲಸಿಕೆಯನ್ನು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ ಒಂದು ವರ್ಷದ ಅವಧಿಯ ಒಳಗಿನ ಮಕ್ಕಳಿಗೆ 0.1 ಎಂ.ಎಲ್. ಚುಚ್ಚುಮದ್ದನ್ನು ಎಡತೋಳಿನ ಮೇಲ್‌ಭಾಗದಲ್ಲಿ ನೀಡಲಾಗುತ್ತದೆ. ಈ ಲಸಿಕೆಯು ಅತ್ಯಂತ ಸುರಕ್ಷಿತವಾಗಿದ್ದು, ಕ್ಷಯರೋಗ ಮತ್ತು ಕುಷ್ಠರೋಗ ತಡೆಗಟ್ಟವಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಕ್ಷಯರೋಗದ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ವಯಸ್ಕರಲ್ಲಿಯೂ ಲಸಿಕೆ ನೀಡುವುದನ್ನು ದೇಶದ ಆಯ್ದ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ.

**ಕ್ಷಯರೋಗ ನಿರ್ಮೂಲನೆ ನಡೆದುಬಂದ ಹಾದಿ:** 1962 ಕ್ಕಿಂತ ಹಿಂದೆ ಈ ಖಾಯಿಲೆಗೆ ನಿಖರವಾದ ಚಿಕಿತ್ಸೆ ಇರಲಿಲ್ಲ. 1962 ರಿಂದ 1996 ರವರೆಗೆ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿ ರೋಗಿಗಳಿಗೆ ಉಚಿತ ಪರೀಕ್ಷೆ ಮತ್ತು ಚಿಕಿತ್ಸೆಯನ್ನು ಒದಗಿಸಲಾಯಿತು. ಈ ಅವಧಿಯಲ್ಲಿ ಸಾನಿಟೋರಿಯಾ ವ್ಯವಸ್ಥೆ ಅಡಿಯಲ್ಲಿ ರೋಗಿಗಳಿಗೆ ಚಿಕತ್ಸೆಯನ್ನು ನೀಡಲಾಗುತ್ತಿತ್ತು. ಆದರೆ, ಆ ಅವಧಿಯಲ್ಲಿ ಉದ್ದೇಶಿತ ನಿರೀಕ್ಷಿತ ಗುರಿಯನ್ನು ಸಾಧಿಸದಿರುವ ಪ್ರಯುಕ್ತ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 1997 ರಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಕ್ಷಯರೋಗವನ್ನು ನಿಖರವಾಗಿ ಸೂಕ್ಷ್ಮದರ್ಶಕದಿಂದ ಪತ್ತೆ ಹಚ್ಚುವ ವಿಧಾನವನ್ನು ಅನುಸರಿಸಲಾಯಿತು. ಕ್ಷಯರೋಗದಿಂದ ಉಂಟಾಗುವ ಮಾರಕ ಪರಿಣಾಮಗಳಿಂದ ರೋಗಿಗಳು ಗುಣಹೊಂದಿ ಕ್ಷಯರೋಗದಿಂದಾಗಿ ಸಾವಿನ ಪ್ರಮಾಣವು ಗಣನೀಯವಾಗಿ ಇಳಿಯಿತು ಮತ್ತು ಪ್ರಮುಖವಾಗಿ ಈ ಕಾರ್ಯಕ್ರಮದಲ್ಲಿ ಡಾಟ್ಸ್ ಅಂದರೆ ನೇರ ನಿಗಾವಣೆ ಚಿಕಿತ್ಸೆಯನ್ನು ಅಳವಡಿಸಲಾಯಿತು. ಹೊಸ ರೋಗಿಗಳಿಗೆ & ಕ್ಷಯ ಮರುಕಳಿಸಿದ ರೋಗಿಗಳಿಗೆ ಚಿಕಿತ್ಸೆಯನ್ನು 6 ತಿಂಗಳುಗಳಿಗೆ ಇಳಿಸಲಾಯಿತು. ರೋಗಿಗಳ ಚಿಕಿತ್ಸೆಯ ಜವಬ್ದಾರಿಯನ್ನು ಚಿಕಿತ್ಸಾ ಬೆಂಬಲಿಗರಾಗಿ ಒಬ್ಬ ಆರೋಗ್ಯ ಕಾರ್ಯಕರ್ತರು ಅಥವಾ ಸಮುದಾಯ ಸ್ವಯಂ ಸೇವಕರಾದ ಆಶಾ ಅಥವಾ ಅಂಗನವಾಡಿ ಕಾರ್ಯಕರ್ತರಿಗೆ ನೀಡಲಾಯಿತು. ಇದರಿಂದಾಗಿ ಚಿಕಿತ್ಸೆಯ ಗುಣಮಟ್ಟ ಹೆಚ್ಚಾಗಿದ್ದಲ್ಲದೇ ರೋಗಿಗಳ ಕ್ಷಯರೋಗದಿಂದ ವಾಸಿಯಾಗುವ ಪ್ರಮಾಣ ಹೆಚ್ಚಿತು. ಕ್ಷಯರೋಗದ ಪತ್ತೆಯಿಂದ ಹಿಡಿದು ಗುಣಮುಖವಾಗುವವರೆಗೆ ಅಂದರೆ ಕಫ ಪರೀಕ್ಷೆ, ಕ್ಷ–ಕಿರಣ ಪರೀಕ್ಷೆ ಮತ್ತು ಔಷಧೋಪಾಚಾರ ಎಲ್ಲವೂ ಈ ಕಾರ್ಯಕ್ರಮದಲ್ಲಿ ಉಚಿತವಾಗಿದೆ.

ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ಬದಲಾಯಿಸಿ ಡಿಸೆಂಬರ್ 2019 ರಿಂದ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ ಎಂದು ಮಾರ್ಪಡಿಸಲಾಯಿತು. ಇದರ ಗುರಿ 2025ಕ್ಕೆ ಕ್ಷಯ ಮುಕ್ತ ಭಾರತವನ್ನಾಗಿಸುವುದು. ಇದರೊಂದಿಗೆ ಕ್ಷಯರೋಗದ ಪತ್ತೆ ಮತ್ತು ಚಿಕಿತ್ಸೆಗೆ ಕ್ಷಯರೋಗಿಯಿಂದ ಯಾವುದೇ ಆರ್ಥಿಕ ಹೊರೆಯಾಗದಂತೆ ನೋಡಿಕೊಳ್ಳುವುದು ಮತ್ತು ಕ್ಷಯರೋಗದಿಂದ ಮರಣ ಹೊಂದುವವರ ಸಂಖ್ಯೆಯನ್ನು ಕಡಿಮೆ ಮಾಡುವುದಾಗಿದೆ.

**ಕ್ಷಯರೋಗದ ಅಂಕಿ ಅಂಶಗಳು:**

ಜಾಗತಿಕ ಮಟ್ಟದಲ್ಲಿ ಭಾರತವು ಟಿಬಿ ಖಾಯಿಲೆಯಲ್ಲಿ ಒಂದನೇ ನಾಲ್ಕು ಭಾಗ ಆವರಿಸಿದೆ(25.90 ಲಕ್ಷ).

ಶೇಕಡ 40 ಕ್ಕಿಂತ ಹೆಚ್ಚು ಜನರು ಭಾರತದಲ್ಲಿ ಟಿಬಿಯಿಂದ ಸೋಂಕಿತರಾಗಿದ್ದಾರೆ. ಅದರಲ್ಲಿ ಪ್ರತಿ ಶತ 10 ರಷ್ಟು ಜನರಿಗೆ ಕ್ಷಯರೋಗ ಉಲ್ಬಣವಾಗುತ್ತದೆ.

ಪ್ರತಿ ದಿನ ಭಾರತದಲ್ಲಿ 60 ಸಾವಿರ ಜನರಿಗೆ ಕ್ಷಯರೋಗದ ಸೋಂಕು ಹರಡುತ್ತಿದ್ದು, ಅದರಲ್ಲಿ 6000 ಜನರು ಕ್ಷಯರೋಗಿಗಳಾಗಿ ಮಾರ್ಪಡು ಹೊಂದುತ್ತಿದ್ದಾರೆ.

ಭಾರತದಲ್ಲಿ ಪ್ರತಿದಿನ ಸುಮಾರು 1000 ಕ್ಕಿಂತ ಹೆಚ್ಚು ಜನರು ಟಿಬಿಯಿಂದ ಸಾವನ್ನಪ್ಪುತ್ತಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ 2024ನೇ ಸಾಲಿಗೆ ಜಿಲ್ಲೆಯಲ್ಲಿ ಒಂದು ವರ್ಷಕ್ಕೆ 2850 (ಸರಕಾರಿ ವಲಯ–2120, ಖಾಸಗಿವಲಯ–730) ಕ್ಷಯರೋಗಿಗಳ ಪತ್ತೆಯ ಗುರಿಯನ್ನು ಹೊಂದಲಾಗಿದ್ದು, ಸರಕಾರಿ ವಲಯದಲ್ಲಿ 2799 ಕ್ಷಯರೋಗಿಗಳು ಪತ್ತೆಯಾಗಿರುತ್ತಾರೆ. ಖಾಸಗಿ ವಲಯದಲ್ಲಿ 90 ಪತ್ತೆಯಾಗಿರುತ್ತಾರೆ. ಒಟ್ಟು 2889 ಕ್ಷಯರೋಗಿಗಳು ಪತ್ತೆಯಾಗಿರುತ್ತಾರೆ. ಇನ್ನೂ ಅನೇಕ ಪ್ರಕರಣಗಳನ್ನು ಪತ್ತೆ ಹಚ್ಚಬೇಕಾಗಿರುತ್ತದೆ. 98 ಬಹು ಔಷದ ನಿರೋದಕ ಕ್ಷಯ ರೋಗಿಗಳು ಹಾಗೂ 147 ಹೆಚ್‌ಐವಿ ಸೊಂಕಿತ ಟಿಬಿ ರೋಗಿಗಳು ಪತ್ತೆಯಾಗಿರುತ್ತಾರೆ. 2023ನೇ ಸಾಲಿಗೆ ಹೋಲಿಸಿದಾಗ 2024ನೇ ಸಾಲಿನಲ್ಲಿ ಕ್ಷಯರೋಗ ಪತ್ತೆಯ ಪ್ರಮಾಣ ಕಡಿಮೆಯಾಗುತ್ತಿದ್ದು, ಇದಕ್ಕೆ ಮುಖ್ಯ ಕಾರಣ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕ್ಷಯರೋಗದ ಹರಡುವಿಕೆಯನ್ನು ತಡೆಗಟ್ಟಲು ಹಮ್ಮಿಕೊಂಡಿರುವ ಅನೇಕ ಯೋಜನೆಗಳಾಗಿವೆ.

ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 57 ಕಫ ಪರೀಕ್ಷಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 38,969 ಪರೀಕ್ಷೆಗಳಾಗಿದ್ದು, 303 ಕ್ಷಯರೋಗಿಗಳು ದೃಢಪಟ್ಟಿರುತ್ತವೆ. ಅದೇ ರೀತಿ ಜಿಲ್ಲೆಯಲ್ಲಿ 4 ಸಿಬಿನಾಟ್ ಕೇಂದ್ರಗಳು ಜಿಲ್ಲಾ ಆಸ್ಪತ್ರೆ, ಕೊಪ್ಪಳ, ಉಪ ವಿಭಾಗ ಆಸ್ಪತ್ರೆ ಗಂಗಾವತಿ, ಸ.ಆ. ಕೇಂದ್ರ ಕನಕಗಿರಿ ಮತ್ತು ಸಾ.ಆಸ್ಪತ್ರೆ, ಕುಷ್ಟಗಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. 2024ನೇ ಸಾಲಿನಲ್ಲಿ ಸಿಬಿನಾಟ್ ಕೇಂದ್ರಗಳಲ್ಲಿ 18,947 ಪರೀಕ್ಷೆಗಳು ಆಗಿದ್ದು, ಅದರಲ್ಲಿ 1360 ಕ್ಷಯರೋಗಿಗಳು ದೃಢಪಟ್ಟು ಇದರಲ್ಲಿ 47 ಬಹುಔಷಧ ನಿರೋಧಕ ಕ್ಷಯರೋಗಿಗಳಾಗಿ ಪತ್ತೆ ಮಾಡಿ ಚಿಕಿತ್ಸೆಯನ್ನು ಪ್ರಾರಂಭಿಸಲಾಗಿದೆ. ಕ್ಷಯರೋಗದ ಪತ್ತೆ ಮತ್ತು ಅನುಸರಣೆಗಾಗಿ ಇನ್ನು ಹೆಚ್ಚಿನ ಯಂತ್ರೋಪಕರಣಗಳ ಅವಶ್ಯಕತೆ ಇದ್ದು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಇದರೊಂದಿಗೆ 10 ಟ್ರೂನಾಟ್ ಕೇಂದ್ರಗಳು ಸಾ.ಆ. ಯಲಬುರ್ಗಾ, ಸ.ಆ.ಕೇಂದ್ರ ಕುಕನೂರು, ಸ.ಆ,ಕೇಂದ್ರ ಕಾರಟಗಿ ಮತ್ತು ಸಾ.ಆ. ಕುಷ್ಟಗಿಯಲ್ಲಿ ಎರಡು ಮಾಡ್ಯೂಲ್ ಹಾಗೂ ಶ್ರೀರಾಮನಗರ, ಹನುಮನಾಳ್, ಹೂಲಗೇರ, ಬೇವೂರು, ಮಂಗಳೂರು, ಮತ್ತು ಅಳವಂಡಿಯಲ್ಲಿ ಒಂದು ಮಾಡ್ಯೂಲ್‌ನ ಟ್ರೂನಾಟ್ ಯಂತ್ರ ಕಾರ್ಯನಿರ್ವಹಿಸುವ ಮೂಲಕ ಹೆಚ್ಚು ಕ್ಷಯರೋಗಿಗಳನ್ನು ಪತ್ತೆ ಮಾಡಲಾಗುತ್ತಿದೆ. 2024ನೇ ಸಾಲಿನಲ್ಲಿ ಟ್ರೂನಾಟ್ ಕೇಂದ್ರಗಳಲ್ಲಿ 8352 ಪರೀಕ್ಷೆಗಳು ಆಗಿದ್ದು, ಅದರಲ್ಲಿ 395 ಕ್ಷಯರೋಗಿಗಳು ದೃಢಪಟ್ಟು ಇದರಲ್ಲಿ 6 ಬಹುಔಷಧ ನಿರೋಧಕ ಕ್ಷಯರೋಗಿಗಳಾಗಿ ಪತ್ತೆಯಾಗಿರುತ್ತದೆ.


ನಿಕ್ಷಯ್ ಪೋಷಣ ಯೋಜನೆ: 2024ನೇ ಸಾಲಿನಲ್ಲಿ ಒಟ್ಟು 2889 ಕ್ಷಯರೋಗಿಗಳನ್ನು ಪತ್ತೆ ಮಾಡಲಾಗಿದ್ದು, ಸದರಿ ಕ್ಷಯರೋಗಿಗಳಿಗೆ ಚಿಕಿತ್ಸೆ ಮುಗಿಯುವವರೆಗೆ ಪ್ರತಿ ತಿಂಗಳು ರೂ. 500 ಗಳನ್ನು ನಿಕ್ಷಯ್ ಪೋಷಣ ಯೋಜನೆ ಅಡಿಯಲ್ಲಿ ಪೌಷ್ಟಿಕ ಆಹಾರಕ್ಕಾಗಿ ನೀಡಲಾಗುತ್ತಿದ್ದು, ನವಂಬರ್ 2024 ರಿಂದ ಹೊಸದಾಗಿ ಪತ್ತೆಯಾದ ಕ್ಷಯರೋಗಿಗಳಿಗೆ ಪ್ರತಿ ತಿಂಗಳು ಮಾಸಿಕ ರೂ. 1000 ಕ್ಕೆ ಹೆಚ್ಚಿಸಲಾಗಿದೆ.

**ವಿನೂತನ ಕ್ರಮಗಳು:** ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕ್ಷಯರೋಗಿಗಳ ಅನುಕೂಲಕ್ಕಾಗಿ ನಿಕ್ಷಯ್ ದಿವಸ ಆಚರಣೆ, ಟಿ.ಬಿ. ಗುರುವಾರ, ಕ್ಷಯ ಮುಕ್ತ ಶಾಲೆ, ಕ್ಷಯಮುಕ್ತ ಕಾರ್ಯಸ್ಥಳ, ಹಾಗೂ ವಿಭಿನ್ನ ಆರೈಕೆ ಮಾದರಿ ಮತ್ತು ಆಸ್ಪತ್ರೆಗಳಲ್ಲಿ ಒಳರೋಗಿಗಳ ತಪಾಸಣೆ ಕಾರ್ಯಕ್ರಮದ ಮೂಲಕ ಕ್ಷಯರೋಗಿಗಳ ತಪಾಸಣೆ ಮಾಡಲಾಗುತ್ತಿದ್ದು, ಇನ್ನು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಪ್ರಧಾನಮಂತ್ರಿ ಕ್ಷಯಮುಕ್ತ ಭಾರತ ಅಭಿಯಾನ–2025ರ ವೇಳೆಗೆ ಭಾರತವನ್ನು ಕ್ಷಯಮುಕ್ತವಾಗಿಸುವ ಉದ್ದೇಶಕ್ಕೆ ಪೂರಕವಾಗುವಂತೆ ಕ್ಷಯರೋಗಿಗಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಲು ಸರ್ಕಾರಿ, ಸರ್ಕಾರೇತರ ಸಂಸ್ಥೆಗಳು, ಚುನಾಯಿತ ಪ್ರತಿನಿಧಿಗಳು, ಕಾರ್ಖಾನೆಗಳು, ಸಂಘ ಸಂಸ್ಥೆಗಳು ಮನವೊಲಿಸಿ ನಿಕ್ಷಯ್ ಮಿತ್ರ ಯೋಜನೆಯಲ್ಲಿಯಲ್ಲಿ ದೃಢಪಟ್ಟ ಕ್ಷಯರೋಗಿಗಳಿಗೆ ಚಿಕಿತ್ಸೆ ಮುಗಿಯುವವರೆಗೆ ಪೌಷ್ಟಿಕ ಆಹಾರ ಒದಗಿಸುವುದಾಗಿದೆ.

100 ದಿನಗಳ ಕ್ಷಯಮುಕ್ತ ಅಭಿಯಾನ: ಭಾರತ ದೇಶದ 347 ಜಿಲ್ಲೆಗಳಲ್ಲಿ ಏಕಕಾಲದಲ್ಲಿ 100 ದಿನಗಳ ಕ್ಷಯಮುಕ್ತ ಅಭಿಯಾನವನ್ನು ಪ್ರಾರಂಭಿಸಲಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ 2024ರ ಡಿಸೆಂಬರ್ 7 ರಂದು ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಿಯವರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಚಾಲನೆಯನ್ನು ನೀಡಲಾಯಿತು. ಈ ಅಭಿಯಾನವು ದುರ್ಬಲ ಮತ್ತು ಅಪಾಯದ ಅಂಚಿನಲ್ಲಿನ ಜನಸಂಖ್ಯೆಯನ್ನು ಕೇಂದ್ರೀಕರಿಸಿದ್ದು, ಮುಖ್ಯವಾಗಿ ಮಧುಮೇಹಿ, ಹೆಚ್.ಐ.ವಿ. ಸೋಂಕಿತರು, ಹಳೇ ಕ್ಷಯರೋಗಿಗಳು ಮತ್ತು ಅವರ ಸಂಪರ್ಕಿತರು, ತಂಬಾಕು ಸೇವನೆ ಮಾಡುವವರು, 60 ವರ್ಷ ಮೇಲ್ಪಟ್ಟವರು ಮತ್ತು ಇತರೆ ಕಾರಣಗಳಿಂದ ರೋಗನಿರೋಧಕ ಶಕ್ತಿ ಕುಂಠಿತವಾಗಿರುವವರನ್ನು ಗುರಿಯನ್ನಾಗಿಸಿಕೊಂಡಿದ್ದು, ಈ ಅಭಿಯಾನದಲ್ಲಿ 2,00,000 ಹೊಸ ಕ್ಷಯರೋಗಿಗಳ ಪತ್ತೆ ಮಾಡುವುದು ಮತ್ತು ಕ್ಷಯರೋಗದ ಮರಣದರವನ್ನು ಕಡಿಮೆ ಮಾಡುವುದಾಗಿದೆ.

ಕ್ಷಯರೋಗವು ಅಘೋಷಿತ ಮುಂದುವರಿದ ತುರ್ತು ಆರೋಗ್ಯ ಪರಿಸ್ಥಿತಿಯಾಗಿದ್ದು, ಕ್ಷಯರೋಗ ನಿರ್ಮೂಲನೆಯು ಸರ್ಕಾರದ ಕ್ರಮಗಳೊಂದಿಗೆ ಸಾರ್ವಜನಿಕ ಸಹಭಾಗಿತ್ವದೊಂದಿಗೆ ಮಾತ್ರ ಸಾಧ್ಯವಾಗಿರುತ್ತದೆ. ಕಾರಣ ಎಲ್ಲಾ ಸಾರ್ವಜನಿಕರು ಈ ಅಭಿಯಾನದಲ್ಲಿ ಕೈಜೋಡಿಸಿ ಕ್ಷಯಮುಕ್ತ ಜಿಲ್ಲೆಗಳನ್ನಾಗಿಸಲು ಸಹಕರಿಸಬೇಕು.



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 30–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1617.41 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9874 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 54.370 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.45 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 366 ಕ್ಯುಸೆಕ್ |
| ಸಾಮರ್ಥ್ಯ | 9.787 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

31–01–2025 – ಶುಕ್ರವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶತಭಿಷ |
| ಯೋಗ | : ವರಿಯಾಣ |
| ಕರಣ | : ಕೌಳವ |
| ಸೂರ್ಯೋದಯ | : 07:08:28 |
| ಸೂರ್ಯಾಸ್ತ | : 18:12:34 |
| ರಾಹು ಕಾಲ | : 11:18–12:41 |
| ಯಮಘಂಡ ಕಾಲ | : 15:27–16:50 |
| ಗುಳಿಕ ಕಾಲ | : 08:31–09:55 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

### ಟಿಬಿಯನ್ನು ಸೋಲಿಸಿ ದೇಶವನ್ನು ಗೆಲ್ಲಿಸಿ

# ಕ್ಷಯ ಪ್ರಕರಣ ಶೂನ್ಯಕ್ಕೆ ತರಲು ಅಧಿಕಾರಿಗಳು ಶ್ರಮಿಸಿ

### ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ



■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಕ್ಷಯರೋಗ ಪ್ರಕರಣಗಳನ್ನು ಶೂನ್ಯಕ್ಕೆ ತಂದು, ಜಿಲ್ಲೆಯನ್ನು ಕ್ಷಯರೋಗ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಅಧಿಕಾರಿಗಳು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಕ್ಷಯರೋಗ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈಗಾಗಲೇ ರೋಗ ಪತ್ತೆಹಚ್ಚಲು ನಗರದ ವಿಮ್ಸ್, ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಬಿನ್ಯಾಟ್ ಯಂತ್ರ ಹಾಗೂ ಟ್ರುನ್ಯಾಟ್ ಮಿಷನ್‌ಗಳಿದ್ದು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯೂ ಅನುಷ್ಠಾನ ಮಾಡಲಾಗಿದೆ. ಇದರಿಂದ ಕ್ಷಯ ಪೀಡಿತರನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕ್ಷಯರೋಗ ಪೀಡಿತರನ್ನು ಶೂನ್ಯಕ್ಕೆ ತರಬೇಕು ಹಾಗೂ ವಿವಿಧೆಡೆ ಸಮುದಾಯದಲ್ಲಿ ಗ್ರಾಮವಾರು ಸಮೀಕ್ಷೆ ಕಾರ್ಯ ನಡೆಸಬೇಕು. ಕ್ಷಯರೋಗಕ್ಕೆ ಸಂಬಂಧಿಸಿದಂತೆ ಆಯುರ್ವೇದದಲ್ಲಿ ಚಿಕ್ಸಿತೆ ನೀಡಬೇಕು. ಇದಕ್ಕೆ ಜಿಲ್ಲಾಡಳಿತದಿಂದ ಸಹಕಾರ ನೀಡಲಾಗುವುದು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ, ಈ ವರ್ಷದ ಘೋಷವಾಕ್ಯ 'ಟಿಬಿಯನ್ನು ಸೋಲಿಸಿ ದೇಶವನ್ನು ಗೆಲ್ಲಿಸಿ' ಎಂಬುದಾಗಿದೆ ಎಂದು ತಿಳಿಸಿದರು.

ಜಾಥಾವು ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಆವರಣದಿಂದ ಆರಂಭಗೊಂಡು ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಆವರಣಕ್ಕೆ ತಲುಪಿತು. ಜಾಥಾದಲ್ಲಿ ಆಯುಷ್ ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು, ಮಹಾವಿದ್ಯಾಲಯದ ಪ್ರಾಧ್ಯಾಪಕರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಕಲಿಕೆಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ದಾರಿ ಉದ್ದಕ್ಕೂ ಘೋಷಣೆಗಳನ್ನು ಕೂಗುತ್ತಾ ಜನರಲ್ಲಿ ಕ್ಷಯ ರೋಗದ ಬಗ್ಗೆ ಜಾಗೃತಿ ಮೂಡಿಸುತ್ತಾ ಸಾಗಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸರಳಾದೇವಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಮಾಧವ ದಿಗ್ಗಾವಿ, ಸಹಾಯಕ ಆಡಳಿತಾಧಿಕಾರಿ ಶ್ರೀನಿವಾಸ್, ಎನ್‌ಎಸ್‌ಎಸ್ ಅಧಿಕಾರಿ ಡಾ.ದೊಡ್ಡಬಸಯ್ಯ, ಆಸ್ಪತ್ರೆಯ ಸ್ಥಾಯಿ ವೈದ್ಯಾಧಿಕಾರಿಗಳಾದ ಡಾ.ಕೊಟ್ರೇಶ್, ಡಾ.ರಾಜೇಶ್, ಡಾ.ರವಿ ಚವ್ಹಾಣ್, ಡಾ.ಶಿವು ಅರಕೇರಿ ಸೇರಿದಂತೆ ವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಇತರರು ಭಾಗವಹಿಸಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 49 ದಿನ

https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಬಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ

ಸಮಯ : 40 ನಿಮಿಷ ಅಂಕಗಳು : 40

**ಭಾಗ – A (ಭೌತವಿಜ್ಞಾನ)**

1. ವಿದ್ಯುತ್ ಪ್ರವಾಹದ ಅಂತರಾಷ್ಟ್ರೀಯ ಏಕಮಾನ ಯಾವುದು ?
A. ವ್ಯಾಟ್ B. ಓಮ್ C. ಆಂಪಿಯರ್ D. ವೋಲ್ಟ್
2. ಒಂದು ಮಸೂರದ ಸಂಗಮ ದೂರವು +0.50m ಆದರೆ ಮಸೂರದ ಸಾಮರ್ಥ್ಯ ಮತ್ತು ವಿಧ.
A. +2.0.D ಮತ್ತು ಪೀನಮಸೂರ B. +2.0.D ಮತ್ತು ನಿಮ್ನಮಸೂರ
C. –2.0.D ಮತ್ತು ನಿಮ್ನಮಸೂರ D. –2.0.D ಮತ್ತು ಪೀನಮಸೂರ
3. ಒಂದು ಸೊಲೆನಾಯ್ಡ್‌ನ ಒಳಭಾಗದಲ್ಲಿ ಕಾಂತೀಯ ಬಲರೇಖೆಗಳು ಸಮಾಂತರ ಸರಳರೇಖೆಗಳಂತೆ ಇರುತ್ತವೆ. ಇದಕ್ಕೆ ಕಾರಣವೇನು ?
4. ಒಂದು ವಸ್ತುವನ್ನು ಪೀನ ಮಸೂರದ F1 ಮತ್ತು 2F1 ನಡುವೆ ಇಟ್ಟಾಗ ಉಂಟಾಗುವ ಪ್ರತಿಬಿಂಬದ ರೇಖಾಚಿತ್ರವನ್ನು ಬರೆಯಿರಿ.
5. ನಿಸರ್ಗದಲ್ಲಿ ಕಾಮನಬಿಲ್ಲು ಉಂಟಾಗುವುದನ್ನು ವಿವರಿಸಿ.
6. 350 W ಸಾಮರ್ಥ್ಯದ ಬ್ರೆಡ್ ಟೋಸ್ಟರ್ ದಿನಕ್ಕೆ 15 ಗಂಟೆಗಳ ಕಾಲ ಬಳಕೆಯಾಗುತ್ತದೆ. 250 W ಸಾಮರ್ಥ್ಯದ ಇಸ್ತ್ರಿ ಪೆಟ್ಟಿಗೆ ದಿನಕ್ಕೆ 5 ಗಂಟೆಗಳ ಕಾಲ ಬಳಕೆಯಾಗುತ್ತದೆ. ಈ ಉಪಕರಣಗಳನ್ನು 30 ದಿನಗಳ ಕಾಲ ಬಳಸಿದಾಗ 1 kWh ಗೆ ರೂ. 4 ರಂತೆ ತಗಲುವ ವೆಚ್ಚವನ್ನು ಲೆಕ್ಕಾಚಾರ ಮಾಡಿ.
7. ಜೌಲನ ಉಷ್ಣೋತ್ಪಾದನಾ ನಿಯಮ ಬರೆಯಿರಿ ? ಜೌಲನ ಉಷ್ಣೋತ್ಪಾದನಾ ನಿಯಮದ ಗಣಿತೀಯ ಸೂತ್ರ ತಿಳಿಸಿ ? ಈ ನಿಯಮದ ಮೇಲೆ ಕಾರ್ಯನಿರ್ವಹಿಸುವ ಉಪಕರಣಗಳನ್ನು ಹೆಸರಿಸಿ.

**ಭಾಗ – B ( ರಸಾಯನ ವಿಜ್ಞಾನ )**

1. ಪ್ರೋಪನಾಲ್ ಮತ್ತು ಪ್ರೊಪೆನ್ಯಾಲ್ ಗಳಲ್ಲಿರುವ ಕ್ರಿಯಾಗುಂಪುಗಳು ಕ್ರಮವಾಗಿ.
A. — OH ಮತ್ತು — CHO B. — OH ಮತ್ತು — COOH
C. — CHO ಮತ್ತು — COOH D. — CHO ಮತ್ತು — CO
2. ಈ ಕೆಳಗಿನ ರಾಸಾಯನಿಕ ಕ್ರಿಯೆಗಳ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ.
ಹೈಡ್ರೋಜನ್ + ಕ್ಲೋರಿನ್ → ಹೈಡ್ರೋಜನ್ ಕ್ಲೋರೈಡ್
3. ಜೇನುನೊಣ ಕುಟುಕಿದಾಗ ಉಂಟಾಗುವ ಉರಿ ಮತ್ತು ನೋವನ್ನು ಹೇಗೆ ಶಮನಗೊಳಿಸಬಹುದು ?
4. ದ್ವಿ ಸ್ಥಾನಪಲ್ಲಟ ಕ್ರಿಯೆ ಎಂದರೇನು ? ದ್ವಿ ಸ್ಥಾನಪಲ್ಲಟ ಕ್ರಿಯೆಗೆ ಉದಾಹರಣೆ ಬರೆಯಿರಿ.
5. ಮಿಶ್ರ ಲೋಹಗಳು ಎಂದರೇನು? ಕಂಚು, ಬೆಸುಗೆ ಲೋಹ ಗಳಲ್ಲಿರುವ ಘಟಕ ಧಾತುಗಳನ್ನು ಹೆಸರಿಸಿ.
6. ಎಣ್ಣೆಗಳ ಹೈಡ್ರೋಜನೀಕರಣ ಎಂದರೇನು? ಇದರ ಕೈಗಾರಿಕಾ ಅನ್ವಯಗಳೇನು ?
7. ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ತೋರಿಸುವ ಉಪಕರಣದ ಜೋಡಣೆಯ ಅಂದವಾದ ಚಿತ್ರವನ್ನು ಬರೆದು ಎಲ್ಲ ಭಾಗಗಳನ್ನು ಗುರುತಿಸಿ?

**ಭಾಗ – C ( ಜೀವ ವಿಜ್ಞಾನ )**

1. ಈ ಕೆಳಗಿನವುಗಳಲ್ಲಿ ಜೈವಿಕ ಸಂವರ್ಧನೆಗೆ ಒಳಪಡುವ ವಸ್ತು,
A. ಬಾಳೆಹಣ್ಣಿನ ಸಿಪ್ಪೆ B. ರಸಗೊಬ್ಬರಗಳು
C. A ಮಾತ್ರ D. B ಮಾತ್ರ
2. ಮಾನವನ ಲಿಂಗವರ್ಣತಂತುಗಳಲ್ಲಿರುವ ಸಮಾನಗಾತ್ರದ ವರ್ಣತಂತುಗಳು
A. X ವರ್ಣತಂತು B. XX ವರ್ಣತಂತುಗಳು
C. Y ವರ್ಣತಂತು D. XY ವರ್ಣತಂತುಗಳು
3. ಹೃದಯದಲ್ಲಿ ಕವಾಟಗಳು ಮತ್ತು ಸೆಪ್ಟಮ್ ನ ಕಾರ್ಯ ಬರೆಯಿರಿ.
4. A. ನಿಶೇಚನದ ನಂತರ ಹೂವಿನಲ್ಲಾಗುವ ಬದಲಾವಣೆಗಳೇನು?
B. ಇವುಗಳ ಕಾರ್ಯ ಬರೆಯಿರಿ :
A. ವೃಷಣಗಳು B. ಪ್ರೋಸ್ಟೇಟ್ ಗ್ರಂಥಿ. C. ಅಂಡನಾಳ/ ಫೆಲೋಪಿಯನ್ ನಾಳ
5 A. ಮಾನವನ ಮಿದುಳಿನ ನೀಳಛೇದ ನೋಟ ತೋರಿಸುವ ಚಿತ್ರ ಬರೆದು ಭಾಗಗಳನ್ನು ಗುರುತಿಸಿ
B. ಮಾನವನ ಬೆಳವಣಿಗೆಯಲ್ಲಿ ಈ ಕೆಳಗಿನ ಹಾರ್ಮೋನ್ ಗಳ ಪಾತ್ರವೇನು
1. ಇನ್ಸುಲಿನ್ 2. ಈಸ್ಟ್ರೋಜನ್

ವಿದ್ಯಾರ್ಥಿಗಳಿಗೆ ಸೂಚನೆ :
ಈ ಮೇಲಿನ ಪ್ರಶ್ನೆಪತ್ರಿಕೆ ಮಾದರಿ ಮಾತ್ರ. ಇದನ್ನು ಬಿಡಿಸುವುದರ ಮೂಲಕ ಪರೀಕ್ಷೆಗೆ ಸಿದ್ಧರಾಗಿ.

-: BEST OF LUCK :-

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ಕವಿ ಮನಸು

### ಆಹಾರ

ಒಂದೇ ಕುಟುಂಬದ ಸದಸ್ಯರು
ಒಂದೇ ಮನೆಯಲಿ ವಾಸಿಸಲಿ
ಮಧುರಭಾವಗಳ ಸಂಗಮವಾಗಲಿ
ಆ ಮನೆ ಸಂತಸದ ಉಸಿರಾಗಲಿ !

ಮಾನಿನಿಯರು ನಳಪಾಕ ಮಾಡಲಿ
ಮಹಿನಿಯರು ಸಹಾಯ ಮಾಡಲಿ
ದುಡಿದ ಹಣ ಯಜಮಾನ ಹತ್ತಿರ ಇರಲಿ
ಯಜಮಾನನ ದಾರಿ ಆದರ್ಶವಾಗಿರಲಿ!

ಒಂದೇ ಬಗೆ ನಳಪಾಕವಿರಲಿ
ಸೂಚಿತ್ವದ ಕಡೆ ಗಮನವಿರಲಿ
ಊಟ ಬಡಿಸುವರು ಹಸನ್ಮೂಖಿ ಇರಲಿ
ಹರ್ಷದ ಭೋಜನ ನಮ್ಮದಾಗಿರಲಿ!

ಹೊರಗಿನ ತಿಂಡಿ ಆಸೆ ಬಾರದಿರಲಿ
ಮನೆಯ ತಿಂಡಿಯೇ ಶ್ರೇಷ್ಠವಾಗಲಿ
ಬಿಸಿ ಬಿಸಿ ತಿಂಡಿ ಬಾಯಿಗೆ ಬರಲಿ
ಆರೋಗ್ಯ ಭಾಗ್ಯ ನಮಗಾಗಿರಲಿ!

ಫುಟ್ ಪಾತಿನಲಿ ತಿಂದರೆ ನಾವು
ರೋಗದ ಗೂಡು ಕಟ್ಟುವೆವು
ಬೇಗನೇ ಬರುವುದು ಸಾವು
ಇದ್ದವರಿಗೆ ತರುವೆವು ನೋವು!

ಈಗಎಲ್ಲೆಡೆ ಮಾಡುವರು ಕಲಬೆರಿಕೆ
ಧಾನ್ಯಗಳಲಿ ಬೆರೆಸುವರು ಕಸ ಕರಿಕೆ
ಪ್ರೆಸ್ಸಾಗಿ ಕಾಣಲು ರಸಾಯನ ಬೆರಕೆ
ಯಾರಿಗೆ ಬೇಕು ಹೊರಗಿನ ಬಯಕೆ!

ಪಾಸ್ಟ್ ಫುಡ್ಡಿನಲಿದೆ ನಕಲಿ ಎಣ್ಣೆ
ಏನೇನು ಬೆರೆತಿದೆ ಬಲ್ಲವರಾರು
ತಿಂದಾಗ ರುಚಿಸುವುದು ತಿಂಡಿ
ಅಲರ್ಜಿಯಾದರೆ ಮೈಯಲ್ಲ ತಿಂಡಿ!!

– ಚಂದ್ರಶೇಖರಯ್ಯ ರೋಣದಮಠ

## ಮೈಕ್ರೋ ನ್ಯೂಸ್

### ಹಣ ಕದ್ದಿದ್ದ ಕಳ್ಳರನ್ನು ಏಳುದಿನದೊಳಗೆ ಬಂಧನ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣ ಯುನಿಯನ್ ಬ್ಯಾಂಕ್ ಬಳಿ ಜ–22 ರಂದು ಹರಾಳು ಕೊಟ್ರೇಶ್ ಎಂಬ ವ್ಯಕ್ತಿಯಿಂದ ಬೈಕ್ ಬ್ಯಾಗಲ್ಲಿದ್ದ 1.80 ಲಕ್ಷ ರೂ.ವನ್ನು ಕದ್ದಿರುವ ಆರೋಪಿತರನ್ನು ಕೇವಲ 7 ದಿನಗಳಲ್ಲಿ ಬಂಧಿಸುವಲ್ಲಿ ಕೊಟ್ಟೂರು ಪೊಲೀಸರು ಯಶಸ್ವಿಯಾಗಿದ್ದು ಪಟ್ಟಣದ ಜನರ ಹಾಗೂ ಎಸ್ಪಿ ಶ್ರೀಹರಿಬಾಬು ಅವರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಆರೋಪಿತರು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಸೂರ್ಯ (19) ಗಾರೆ ಕೆಲಸ ಮಾಡುತ್ತಿದ್ದು, ಸದರಿ ಜಿಲ್ಲೆ, ಸದರಿ ತಾಲೂಕಿನ ಹರೀಶ್ ಎಚ್ ಆರ್(28) ಚಾಲಕ ಕೆಲಸ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಎಡೆ ಮುರಿ ಕಟ್ಟಿ ಅವರಲ್ಲಿದ್ದ 1.50 ಲಕ್ಷ ರೂ ಹಣ ಮತ್ತು ಹಿರೋಹೊಂಡಾ ಕಂಪನಿಯ ಪ್ಯಾಷನ್ ಪ್ರೊ ಗಾಡಿಯನ್ನು ವಶ ಪಡಿಸಿಕೊಂಡಿದ್ದಾರೆ.

ಕಳ್ಳತನದ ಪ್ರಕರಣ ಕೊಟ್ಟೂರು ಠಾಣೆಯಲ್ಲಿ ಕೇಸು ದಾಖಲಾಗಿ ಮರು ಕ್ಷಣವೇ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್ ಹಾಗೂ ಹೆಚ್ಚುವರಿ ಪೊಲೀಸ್ ಅಧಿಕ್ಷಕ ಸಲೀಂ ಪಾಷಾ, ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ್, ಹರಪನಹಳ್ಳಿ ಡಿವೈಎಸ್ಪಿ ವೆಂಕಟಪ್ಪ ನಾಯಕ ಇವರ ಮಾರ್ಗದರ್ಶನದಲ್ಲಿ ಆರೋಪಿತರ ಪತ್ತೆಯ ಕಾರ್ಯಚರಣೆಗಿಳಿದರು.

ಹೂವಿನಹಡಗಲಿ ಸಿಪಿಐ ದೀಪಕ್ ಆರ್ ಭೂಸ ರೆಡ್ಡಿ, ಕೊಟ್ಟೂರು ಸಿಪಿಐ ವೆಂಕಟಸ್ವಾಮಿ ಇವರ ನೇತೃತ್ವದಲ್ಲಿ ಹಿರೇಹಡಗಲಿಯ ಪಿಎಸ್ಐ ಭರತ್ ಪ್ರಕಾಶ್ ಹಾಗೂ ಕೊಟ್ಟೂರು ಪಿಎಸ್ಐ ಗೀತಾಂಜಲಿ ಸಿಂಧೆ, ಸಿಬ್ಬಂದಿಗಳಾದ ಬಸವರಾಜ್, ವೀರೇಶ್ ನೇತೃತ್ವದಲ್ಲಿ ಕಾರ್ಯಚರಣೆ ವೇಗ ಪಡೆದು ಆರೋಪಿಗಳನ್ನು ಬಂದಿಸುವಲ್ಲಿ ಕಾರ್ಯಾಚರಣೆ ಇಂದು ಯಶಸ್ವಿಯಾಗಿದೆ.

ಸೂಚನೆ: ಫೆ– 22 ಕ್ಕೆ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಜರುಗಲಿದ್ದು, ಅಂದು ಕೊಟ್ಟೂರು ಪಟ್ಟಣಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಜನರು ಸೇರುತ್ತಾರೆ ಈ ಹಿನ್ನೆಲೆ ರಥೋತ್ಸವಕ್ಕೆ ಆಗಮಿಸುವ ಭಕ್ತರು ತಮ್ಮ ಸುರಕ್ಷತೆಯ ದೃಷ್ಟಿಯಿಂದ ಬೆಲೆ ಬಾಳು ಆಭರಣಗಳನ್ನು ಧರಿಸಿಕೊಂಡು ಬರವುದು ಸೂಕ್ತವಲ್ಲ ಹಾಗೂ ಖದೀಮರಿಂದ ಸದಾ ಜಾಗ್ರತರಾಗಿ ಇರಬೇಕು ಎಂದು ಪೊಲೀಸ್ ಅಧಿಕಾರಿಗಳು ಸೂಚಿಸಿದ್ದಾರೆ.

# ಚಿರಬಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಮೇಳೈಸಿದ ಅದ್ದೂರಿ ಸುಗ್ಗಿ ಸಂಭ್ರಮ

## ಇಸಿಒ ನಿಂಗಪ್ಪ ಅಭಿಮತ | ಮಕ್ಕಳಲ್ಲಿ ಮಾರುಕಟ್ಟೆ ಅನುಭವದ ಜೊತೆ ಬದುಕಿನ ಅರಿವು ಹೆಚ್ಚಳ



**ಹಂಪಿ ಟೈಮ್ಸ್ ಕೊಟ್ಟೂರು**

ಆಧುನಿಕ ಭರಾಟೆಯಲ್ಲಿ ಕಣ್ಮರೆಯಾಗುತ್ತಿದ ಸುಗ್ಗಿ ಸಂಭ್ರಮವನ್ನು, ಇಂದು ವಿದ್ಯಾರ್ಥಿಗಳಿಗೆ ಪರಿಚಯಿಸಿ ಅರಿವು ಮೂಡಿಸಿದ ಶಾಲಾ ಶಿಕ್ಷಕರ ಕಾರ್ಯ ಶ್ಲಾಘನೀಯ ಎಂದು ಇಸಿಒ ನಿಂಗಪ್ಪ ಸಂಭ್ರಮವನ್ನು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದರು.

ತಾಲೂಕಿನ ಚಿರಿಬಿ ಗ್ರಾಮದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಸಹಯೋಗದಲ್ಲಿ ಏರ್ಪಡಿಸಿದ್ದ ಸುಗ್ಗಿ ಸಂಭ್ರಮ ಕಾರ್ಯಮದಲ್ಲಿ, ಅದ್ದೂರಿಯಾಗಿ ಮೇಳೈಸಿದ ಸುಗ್ಗಿ ಸಂಭ್ರಮವನ್ನು ವೀಕ್ಷಿಸಿ ನಂತರ ಮಾತನಾಡಿದರು. ಗ್ರಾಮೀಣ ಬದುಕಿನ ಸೊಗಡು ಮನಸ್ಸಿಗೆ ಆಹ್ಲಾದಕರ ನೀಡುತ್ತದೆ. ಮಕ್ಕಳಲ್ಲಿ ಮಾರುಕಟ್ಟೆ ಅನುಭವದ ಜೊತೆ ಬದುಕಿನ ಕಲೆಗಳ ಬಗ್ಗೆ ಅರಿವು ಹೆಚ್ಚಿಸುತ್ತದೆ ಎಂದರು

ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಜಿತೇಂದ್ರ ಸ್ವಾಮಿ ಮಾತನಾಡಿ, ರೈತರು ಹಿಂದೆ ಬಹು ಬೆಳೆ ಪದ್ಧತಿಯನ್ನು ಬಿಟ್ಟು ಮೆಕ್ಕೆಜೋಳ, ಶೇಂಗಾ, ಕಬ್ಬು, ರೇಷ್ಮೆ ಸೇರಿದಂತೆ ಇತರೆ ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವುದರಿಂದ ಸಿರಿಧಾನ್ಯಗಳ ಪರಿಚಯ ಹಾಗೂ ಅವುಗಳ ಮಹತ್ವದ ಬಗ್ಗೆ ಯುವ ಪೀಳಿಗೆಗೆ ಅರಿವು ಇಲ್ಲದಾಗಿದೆ ಈ ಸುಗ್ಗಿ ಸಂಭ್ರಮ ಇಂದು ಪರಿಚಯಿಸಿದೆ ಎಂದರು.

ವ್ಯವಸಾಯದ ಸಲಕರಣಿಗಳು, ರಂಟೆ, ಕುಂಟೆ, ಉಳುಮೆ ಮಾಡುವ ಜೋಡೆತ್ತುಗಳು ಮತ್ತು ಕುಂಬಾರಿಕೆ, ಕಂಬಾರಿಕೆ ಹಾಗೂ ಬಡಿಗಿ ಕೆಲಸ, ಶಿಲ್ಪಿ ಕೆತ್ತನೆ ಸೇರಿದಂತರ ನೇಗಿಲು ಹೊಡೆಯುವ ರೈತ ಕಸಬುಗಳಲ್ಲಿ, 12ನೇ ಶತಮಾನದ ಶರಣರ, ಶರಣಿಯರ ಮತ್ತು ಸಾಧು ಸಂತರ ವೇಷ ಭೂಷಣ ಹಾಗೂ ನಡೆನುಡಿಗಳಲ್ಲಿ ವಿದ್ಯಾರ್ಥಿಗಳು ಕಂಗೊಳಿಸಿದರು.

ಬೀಸುವುದು, ಗೇರುವುದು ಮಜ್ಜಿಗೆ ಕಟಿಯುವುದು, ರೊಟ್ಟಿ ಮಾಡುವುದು, ತರಕಾರಿ ವ್ಯಾಪಾರ ಮತ್ತು ರಂಗೋಲಿ ಹಾಕುವುದು, ಮುತ್ತೈದಿಯರೆಲ್ಲ ಸೇರಿ ಬಳೆಗಾರನಲ್ಲಿ ಬಳೆ ಹಾಕಿಸಿಕೊಳ್ಳುವ ಸಂಭ್ರಮ ಹಾಗೂ ಪಸಲು ಒಕ್ಕಾಣಿ ದೃಷ್ಯ ಸೇರಿದಂತೆ ವಿವಿಧ ವೇಷ ಭೂಷಣಗಳಲ್ಲಿ ಕೃಷಿ ಗೀತೆಗಳಿಗೆ ನೃತ್ಯ ಪ್ರದರ್ಶಿಸಿ ನೋಡುಗರನ್ನು ವಿದ್ಯಾರ್ಥಿನೀಯರು ಗಮನ ಸೆಳೆದರು.

ಮನೋರಂಜನೆಯ ಪಗಡೆ ಆಟ, ಹುಲಿ ಮನೆ ಆಟ, ಕವಡೆ ಆಟ ಹಾಗೂ ಗರಡಿ ಮನೆ ಸೇರಿದಂತೆ ಇತರೆ ಹಿಂದಿನ ಹಳ್ಳಿಯ ಆಟಗಳ ಕಿರು ಪ್ರದರ್ಶನಗಳು ಹಾಗೂ ಕುಟುಂಬದಲ್ಲಿ ನಿತ್ಯದ ಬದುಕಿನ ಆಹಾರ ಪದಾರ್ಥಗಳು ಪದ್ಧತಿಗಳ ಪ್ರದರ್ಶನವು ಎಲ್ಲರ ಮನಸನ್ನ ಸೆಳೆದವು.

ಹಿಂದಿನ ಸಂತೆಯ ವ್ಯಾಪಾರ ಬಟ್ಟೆ ಮಾರುವುದು, ತರಕಾರಿ ಮಾರಾಟ, ಕೃಷಿ ಕರಿಕರಗಳ ಮಾರಾಟ, ಕುಲುಮೆ ಮಾಡುವುದು ಮತ್ತು ಕಾಳು ಕಡಿ ವ್ಯಾಪಾರ ಹಾಗೂ ದನದ ವ್ಯಾಪಾರ ಸೇರಿದಂತೆ ವಿವಿಧ ಪ್ರದರ್ಶನಗಳನ್ನು ಸುಗ್ಗಿ ಸಂಭ್ರಮದಲ್ಲಿ ಆಯೋಜಿಸಲಾಗಿತ್ತು.

ಸುಗ್ಗಿ ಸಂಭಮವು ಹಿಂದಿನ ಕೃಷಿ ಪದ್ಧತಿ, ಕಷಿ ಪರಿಕರಗಳು ಮತ್ತು ಕೂಡು ಬಧುಕಿನ ಸಂಭ್ರಮ ಹಾಗೂ ಸಹಕಾರ, ಸಹಬಾಳ್ವೆಯ ಸಮುದಾಯದ ಪರಿಚಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟಿತು.

ಈ ಸುಗ್ಗಿ ಸಂಭ್ರಮವನ್ನು ವೀಕ್ಷಿಸಲು ಬಂದಿದ್ದ ಗ್ರಾಮದ ಹಿರಿಯರು ತಮ್ಮ ಹಿಂದಿನ ಬದುಕು ಹಾಗೂ ಜೀವನ ಪದ್ಧತಿಯನ್ನು ಆಧುನಿಕ ಘಟ್ಟದಲ್ಲಿ ವಸ್ತು ಪ್ರದರ್ಶನದಲ್ಲಿ ನೋಡಿ ಆನಂದ ಪಡುವ ಜತೆಗೆ ತಮ್ಮ ಹಿಂದಿನ ನೊವು ನಲಿವಿನ ನೆನಪಾಗಿ ಅವರ ಕಣ್ಣಾಲೆಗಳು ತೇವಗೊಂಡವು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಪಿ. ನಾಗರಾಜ್, ಪ್ರಾಥಮಿಕ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಸುರೇಶ್, ಪ್ರೌಢಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಸಿದ್ದೇಶ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ನಾಗೇಶ ಸೇರಿದಂತೆ ಗ್ರಾಪಂ ಸದಸ್ಯರು, ಎಸ್ಡಿಎಂಸಿ ಸದಸ್ಯರು, ಪೋಷಕರು ಹಾಗೂ ಶಾಲಾ ಶಿಕ್ಷಕರು, ಮುದ್ದು ಮಕ್ಕಳು ಹಾಜರಿದ್ದರು.









# ಗಂಡಾಂತರ ಗರ್ಭಿಣಿಯರತ್ತ ನಿಗಾವಹಿಸಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ | ಶಿಶು ಮರಣ ತಡೆಗಟ್ಟುವಿಕೆ ಸಭೆ



**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿನ ಗಂಡಾಂತರ ಗಂಡಾಂತರ ಗರ್ಭಿಣಿ ಮಹಿಳೆಯರ ಮೇಲೆ ನಿರಂತರ ನಿಗಾ ವಹಿಸುವ ಮೂಲಕ ತಾಯಿ–ಶಿಶು ಮರಣ ಸಂಭಂವಿಸದಂತೆ ವೈದ್ಯಾಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ತಾಯಿ ಮತ್ತು ಶಿಶು ಮರಣ ತಡೆಗಟ್ಟುವಿಕೆ ಕುರಿತ ಅಂತರ ಇಲಾಖೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗಂಡಾಂತರ ಗರ್ಭಿಣಿ ಮಹಿಳೆಯರಿಗೆ ರಕ್ತಹೀನತೆ, ಪೌಷ್ಠಿಕ ಆಹಾರದ ಕೊರತೆ, ಕಬ್ಬಿಣಾಂಶ ಮಾತ್ರೆಗಳ ಸೇವನೆ ಕುರಿತು ಆಶಾಕಾರ್ಯಕರ್ತೆಯರು ಮನೆ ಭೇಟಿ ಸಂದರ್ಭದಲ್ಲಿ ಸೂಚಿಸಬೇಕು. ರಕ್ತಹೀನತೆ ಉಂಟಾಗುವುದು ತಡೆಗಟ್ಟುವ ಮೂಲಕ ಜಿಲ್ಲೆಯಲ್ಲಿ ಸಹಜ ಹೆರಿಗೆಯೂ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ತಾಯಂದಿರ ಆರೈಕೆ ಕುರಿತು ಕುಟುಂಬದ ಸದಸ್ಯರಿಗೆ ತಿಳಿ ಹೇಳಬೇಕು. ಮುಖ್ಯವಾಗಿ ಚೊಚ್ಚಲು ಗರ್ಭಿಣಿ ಅವಧಿಯಲ್ಲಿ ವೈದ್ಯಕೀಯ ಕಾರಣಗಳಿಂದ ಗುರ್ತಿಸಲ್ಪಡುವ ಗಂಡಾಂತರ ಗರ್ಭಿಣಿ ಸಂದರ್ಭದಲ್ಲಿ ಹೆಚ್ಚಿನ ಕಾಳಜಿ ವಹಿಸಲು ಆದ್ಯತೆ ನೀಡಬೇಕು. ಮಗು ಜನನದ ಬಳಿಕ ತೂಕದ ಆಧಾರದ ಮೇಲೆಯೂ ಕಾಳಜಿ ವಹಿಸುವ ಮೂಲಕ ಜಾಗ್ರತೆ ವಹಿಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಎಸ್.ಸಂಕನೂರು ಅವರು ಮಾತನಾಡಿ, ಹೆರಿಗೆಯಾದ ನಂತರವು ನಿಗಧಿತ ಕಾಲಾವಧಿಯೊಳಗೆ ಸಣ್ಣ–ಪುಟ್ಟ ಆರೋಗ್ಯ ಸಮಸ್ಯೆ ಕಂಡುಬಂದರೂ ಸಹ ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಕೇವಲ ದಿನನಿತ್ಯದ ಔಷಧಿಗಳ ಶಿಫಾರಸ್ಸು ಮಾಡಬಾರದು ಎಂದು ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕುಟುಂಬ ಕಲ್ಯಾಣ ಅನುಷ್ಠಾನ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ., ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ.ವಿ., ಬಿಮ್ಸ್ ತಜ್ಞರಾದ ಡಾ. ಚಂದ್ರಶೇಖರ್, ಡಾ.ಶ್ರೀಕಾಂತ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ್ ಸೇರಿದಂತೆ ತಾಲ್ಲೂಕು ಆರೋಗ್ಯ ಅಧಿಕಾರಿಗಳು, ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಗುರಿ ಸಾಧಿಸಲು ಸಾಮಾನ್ಯ ಜನರ ಸಹಕಾರ ಅಗತ್ಯ : ಡಾ.ಭಾಸ್ಕರ್ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಕ್ಷಯ ಮುಕ್ತ ಭಾರತ ನಿರ್ಮಾಣದ ಗುರಿಯನ್ನು ಸಾಧಿಸಲು ಸರ್ಕಾರದ ಜತೆಗೆ ಜನಸಮಾನ್ಯರ ಸಹಕಾರ ಅಗತ್ಯವಾಗಿದೆ ಎಂದು ಕ್ಷಯರೋಗ ನಿರ್ಮೂಲನ ಘಟಕದ ಮುಖ್ಯಾಧಿಕಾರಿ ಡಾ.ಭಾಸ್ಕರ್ ಹೇಳಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಕುಟುಂಬ ಮತ್ತು ಆರೋಗ್ಯ ಕಲ್ಯಾಣ ಇಲಾಖೆ, ಟಿಎಂಎಇ ಆಯುರ್ವೇದ ಮಹಾವಿದ್ಯಾಲಯ, ಆಯುಷ್ ಫೆಡೆರೇಷನ್ ಆಫ್ ಇಂಡಿಯಾ ಸಹಯೋಗದಲ್ಲಿ ಏರ್ಪಡಿಸಿದ್ದ ನಿಕ್ಷಯ ಜಾಥಾಕ್ಕೆ ಚಾಲನೆ ನೀಡಿ ಗುರುವಾರ ಮಾತನಾಡಿದರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ಷಯ ಮುಕ್ತ ಭಾರತ ನಿರ್ಮಿಸುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಿದ್ದು, ನಿಗದಿತ ಗುರಿ ಸಾಧಿಸಲು ಸಾಮಾನ್ಯ ಜನರ ಸಹಕಾರ ಅಗತ್ಯವಾಗಿದೆ. ಕ್ಷಯ ರೋಗದ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವುದರಿಂದ ಕ್ಷಯ ನಿರ್ಮೂಲನೆ ಸಾಧ್ಯವಾಗಿದೆ. ಕ್ಷಯ ರೋಗಿಯು ಕೆಮ್ಮಿದಾಗ, ಸೀನುವಾಗ ಕರವಸ್ತ್ರಗಳಿಂದ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳಬೇಕು. ಎಲ್ಲರೂ ಸೋಪಿನಿಂದ ಕೈಗಳನ್ನು ತೊಳೆಯಬೇಕು. ಎಲ್ಲೆಂದರಲ್ಲಿ ಕಫವನ್ನು ಉಗುಳಬಾರದು. ಗಾಳಿ, ಬೆಳಕು ಸರಾಗವಾಗಿ ಬರುವಂತೆ ಮಾಡಲು ಮನೆಗಳ ಕಿಟಕಿ, ಬಾಗಿಲುಗಳನ್ನು ತೆರದಿಡಬೇಕು. ಕ್ಷಯರೋಗ ಮೈಕ್ರೋಬ್ಯಾಕ್ಟಿರಿಯಂ ಟ್ಯುಬರ್‌ಕ್ಯುಲೋಸಿಸ್ ಎಂ ರೋಗಾಣುವಿನಿಂದ ಉಂಟಾಗುವ ಒಂದು ಸಾಂಕ್ರಮಿಕ ರೋಗ. ಎರಡು ವಾರಕ್ಕಿಂತ ಹೆಚ್ಚು ಅವಧಿಯ ಕೆಮ್ಮು, ರಾತ್ರಿ ವೇಳೆ ಜ್ವರ, ಬೆವರುವುದು, ಕಫ, ಕಫದಲ್ಲಿ ರಕ್ತ, ಎದೆನೋವು, ಹಸಿವಾಗದಿರುವುದು, ತೂಕ ಇಳಿಕೆ ಕ್ಷಯರೋಗದ ಲಕ್ಷಣಗಳಾಗಿವೆ ಎಂದರು.



ಇದಕ್ಕೂ ಮುನ್ನಾ ನಿಕ್ಷಯ ಜಾಥಾ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಿಂದ ಆರಂಭಗೊಂಡು ಗಾಂಧಿವೃತ್ತ, ಪುನೀತ್‌ರಾಜಕುಮಾರ್ ವೃತ್ತ, ಅಂಬೇಡ್ಕರ್ ವೃತ್ತ ಮಾರ್ಗವಾಗಿ ಕಾಲ್ನಡಿಗೆ ಜಾಥಾದ ಮೂಲಕ ಸಂಚಾರಿಸಿ ಕ್ಷಯರೋಗ ನಿವಾರಣೆ ಘೋಷಣೆಗಳನ್ನು ಕೂಗುತ್ತಾ, ಸಾರ್ವಜನಿಕರಿಗೆ ಕರಪತ್ರಗಳು ಹಂಚುವ ಮೂಲಕ ಜನಜಾಗೃತಿ ಮೂಡಿಸಲಾಯಿತು.

ಈ ವೇಳೆ ಆಯುಷ್ ಇಲಾಖೆ ವೈದ್ಯರಾದ ಡಾ.ಗುರುಬಸವರಾಜ, ಆಯುಷ್ ಫೆಡರೇಷನ್ ಆಫ್ ಇಂಡಿಯಾ ಹೊಸಪೇಟೆ ಘಟಕದ ಅಧ್ಯಕ್ಷ ಡಾ.ಬಿ.ವಿ.ಭಟ್, ಟಿಎಂಎಇ ಆಯುರ್ವೇದ ಮಹಾವಿದ್ಯಾಲಯದ ಡಾ.ನಟರಾಜ್, ಆರೋಗ್ಯ ಇಲಾಖೆ ಆರೋಗ್ಯ ಶಿಕ್ಷಣಾಧಿಕಾರಿ ಮುತ್ತು ದೊಡ್ಡಮನಿ ಸೇರಿದಂತೆ ವೈದ್ಯಕೀಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿಜಯನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹುತಾತ್ಮರ ದಿನ ಆಚರಣೆ



**ಹಂಪಿ ಟೈಮ್ಸ್ ಹೊಸಪೇಟೆ**

ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದವರ ಜ್ಞಾಪಕಾರ್ಥವಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹುತಾತ್ಮರ ದಿನಾಚರಣೆ ನಿಮಿತ್ತ ಮೌನಚಾರಣೆ ಮಾಡುವ ಮೂಲಕ ಗುರುವಾರ ಹುತಾತ್ಮರರನ್ನು ಸ್ಮರಿಸಲಾಯಿತು. ಈ ವೇಳೆ ಜಿಪಂ ಉಪಕಾರ್ಯದರ್ಶಿ ಭೀಮಪ್ಪ ಲಾಳಿ, ಬಿಸಿಯೂಟದ ಜಿಲ್ಲಾ ಯೋಜನಾಧಿಕಾರಿ ಶೇಖರಪ್ಪ ಹೊರಪೇಟೆ, ತಹಶೀಲ್ದಾರರಾದ ಮೇಘಾ, ಕಾರ್ತಿಕ್, ಮಂಜುನಾಥ ಸೇರಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಸಿಬ್ಬಂದಿಗಳು ಭಾಗವಹಿಸಿದ್ದರು.

# ಕನ್ನಡ ವಿವಿಯಲ್ಲಿ ಹುತಾತ್ಮರ ಸ್ಮರಣೆ



**ಹಂಪಿ ಟೈಮ್ಸ್ ಹೊಸಪೇಟೆ:** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಹುತಾತ್ಮರಾದ ಮಹನೀಯರ ಜ್ಞಾಪಕಾರ್ಥವಾಗಿ ಗುರುವಾರ ಕನ್ನಡ ವಿಶ್ವವಿದ್ಯಾಲಯದ ಕ್ರಿಯಾಶಕ್ತಿ ಸಿಂಡಿಕೇಟ್ ಸಭಾಂಗಣದಲ್ಲಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ, ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ, ಅಧಿಕಾರಿ ವರ್ಗ, ಸಿಬ್ಬಂದಿಗಳು ಹಾಗೂ ಆಯಾ ವಿಭಾಗಗಳಲ್ಲೂ ಅಧ್ಯಾಪಕರು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಮೌನಾಚರಣೆ ಮಾಡಿದರು

# ವಿದ್ಯಾರ್ಥಿಗಳಿಗೆ ಕುಷ್ಠರೋಗ ನಿರ್ಮೂಲನೆ ಪ್ರತಿಜ್ಞಾ ವಿಧಿ ಬೋಧನೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಗುರುವಾರ ತಾಲ್ಲೂಕು ಆರೋಗ್ಯ ಇಲಾಖೆ ಹಾಗು ತಿಮ್ಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಕುಷ್ಠರೋಗ ಕುರಿತು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದ ಕಿರಿಯ ಆರೋಗ್ಯ ನಿರೀಕ್ಷಕಿ ಭವ್ಯಶ್ರೀ ಮಾತನಾಡಿ, ಕುಷ್ಠರೋಗವು ಗುಣಪಡಿಸಬಹುದಾಗ ರೋಗವಾಗಿದ್ದು, ಯಾರು ಕೂಡಾ ಆತಂಕಪಡಬೇಕಾಗಿಲ್ಲ. ಬಹುವಿಧ ಔಷಧಿ ಚಿಕಿತ್ಸೆಯಿಂದ ಗುಣಪಡಿಸಬಹುದಾಗಿದ್ದು, ಈ ಔಷಧಿ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಸಿಗುತ್ತದೆ. ರೋಗವನ್ನು ಮರೆ ಮಾಚದೆ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಪಡೆಯಬೇಕು ಎಂದು ಹೇಳಿದರು.

ಪ್ರೌಢ ಶಾಲಾ ವಿಭಾಗದ ಉಪ ಪ್ರಾಚಾರ್ಯ ಬಸವರಾಜ, ಆಶಾ ಕಾರ್ಯಕರ್ತೆಯರಾದ ದೀಪಾ, ಎ.ಎಂ. ಸಾವಿತ್ರಿ, ನಾಗರತ್ನಮ್ಮ, ಮಂಗಳಗೌರಿ, ಜ್ಯೋತಿ ಹಾಗೂ ಶಿಕ್ಷಕರು ಭಾಗಿಯಾಗಿದ್ದರು.

# ರಾಷ್ಟ್ರೀಯ ಸ್ವಚ್ಛತಾ ದಿವಸ



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಕೊಪ್ಪಳ ನಗರ ಸಭೆ ಕಾರ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಗರದ ಶ್ರೀ ಗವಿಸಿದ್ದೇಶ್ವರ ಕಾಲೇಜ್ ಹತ್ತಿರ "ರಾಷ್ಟ್ರೀಯ ಸ್ವಚ್ಛತಾ ದಿವಸ ಕಾರ್ಯಕ್ರಮ ನಡೆಯಿತು.

ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಸಂಗಪ್ಪ ದರಗದ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮಹಾತ್ಮ ಗಾಂಧೀಜಿಯವರು ಹುತಾತ್ಮರಾದ ದಿನವನ್ನು "ರಾಷ್ಟ್ರೀಯ ಸ್ವಚ್ಛತಾ ದಿನ ಅಂತ ಆಚರಿಸಲಾಗುತ್ತದೆ. ಈ ಕಾರ್ಯಕ್ರಮದ "ಮುಖ್ಯ ಉದ್ದೇಶ ಅಂತರಂಗ ಮತ್ತು ಬಹಿರಂಗದ ಸ್ವಚ್ಛತೆಯನ್ನು ಮಾಡಿಕೊಳ್ಳುವುದನ್ನು ನೆನಪಿಸುವ ಕಾರಣಕ್ಕಾಗಿ ಆಚರಿಸಲಾಗುತ್ತದೆ. ನಾವೆಲ್ಲರೂ ಕೇವಲ ಬಹಿರಂಗದ ಸ್ವಚ್ಛತೆಗೆ ಗಮನ ಕೊಡದೆ ಅಂತರಂಗವನ್ನು ಸಹ ಸ್ವಚ್ಛವಾಗಿಟ್ಟುಕೊಳ್ಳುವುದಾಗಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರು, ಅಧಿಕಾರಿ, ಸಿಬ್ಬಂದಿಗಳು ಮತ್ತು ಪೌರಕಾರ್ಮಿಕರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.